ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಡಿಸೆಂಬರ್ 15, 2024

ಸಂಪುಟ : 51 ಸಂಚಿಕೆ : 212 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

Narayana Health

ಸೂಪರ್ ಸ್ಪೆಷಾಲಿಟಿ ಸೇವೆಗಳಿಗಾಗಿ ನಿಮ್ಮ ವಿಶ್ವಾಸಾರ್ಹ ಆಸ್ಪತ್ರೆ

ಎಸ್ ಎಸ್ ನಾರಾಯಣ ಹೆಲ್ತ್, ದಾವಣಗೆರೆ



ಹೃದಯ ಆರೈಕೆ | ನರರೋಗ ಆರೈಕೆ | ಕಿಡ್ನಿ ಆರೈಕೆ | ಮೂತ್ರಕೋಶ ಆರೈಕೆ | ಗ್ಯಾಸ್ಟ್ರೋ ಸೈನ್ಸಸ್

ಎನ್ ಎಚ್-4, ಬೈಪಾಸ್ ರಸ್ತೆ, ದಾವಣಗೆರೆ | Take Care 1800 309 0309 www.narayanahealth.org



ಜುಗಲ್ ಬಂದಿ

ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಏರ್ಪಡಿಸಲಾಗಿರುವ ಸ್ವದೇಶಿ ಮೇಳದ ಅಂಗವಾಗಿ ಶನಿವಾರ ಪ್ರಕಾಶ್ ಹೆಗಡೆ, ಕಲ್ಲಾರೆಮನೆ ಮತ್ತು ತಂಡದವರಿಂದ ಜುಗಲ್ ಬಂದಿ ಸಂಗೀತ ಕಾರ್ಯಕ್ರಮ ನಡೆಯಿತು.

# ನಮ್ಮ ಸರ್ಕಾರ ಸಂವಿಧಾನ ಬಲಪಡಿಸಿದೆ

## ರುಚಿ ಕಂಡ ಕಾಂಗ್ರೆಸ್ ಸಂವಿಧಾನ ಘಾಸಿಗೊಳಿಸಿದೆ : ಪ್ರಧಾನಿ ಮೋದಿ ವಾಗ್ದಾಳಿ

ನವದೆಹಲಿ, ಡಿ. 14 - ಒಮ್ಮೆ ರುಚಿ ಕಂಡ ಕಾಂಗ್ರೆಸ್, ಸಂವಿಧಾನವನ್ನು ಪದೇ ಪದೇ ಘಾಸಿಗೊಳಿಸಿದೆ. 2014ರಲ್ಲಿ ತಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ, ಸಂವಿಧಾನದ ದೃಷ್ಟಿಕೋನಕ್ಕೆ ಅನುಗುಣವಾಗಿ ದೇಶವನ್ನು ಬಲಗೊಳಿಸಿದೆ ಹಾಗೂ ಒಗ್ಗೂಡಿಸಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಸಂವಿಧಾನ ರೂಪುಗೊಂಡು 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ಚರ್ಚೆಗೆ ಉತ್ತರಿಸಿ ಅವರು ಮಾತನಾಡಿದರು.

ಈ ಹಿಂದೆ ಆಡಳಿತ ನಡೆಸಿದ



ಕಾಂಗ್ರೆಸ್ ಸರ್ಕಾರಗಳು ದೇಶದ ಐಕ್ಯತೆಗೆ ವಿರುದ್ಧವಾಗಿ ವಿಭಜನೆಯ ವಿಷ ಬೀಜ ಬಿತ್ತಿದ್ದವು. ಇದರಿಂದಾಗಿ ವಿರೋಧಾಭಾಸಗಳು ಹೆಚ್ಚಾಗಿ ಒಗ್ಗಟ್ಟಿಗೆ ಹಾನಿಯಾಗಿತ್ತು ಎಂದು ಪ್ರಧಾನಿ ಹೇಳಿದರು.

ಕಾಂಗ್ರೆಸ್ ಪಕ್ಷದ ನೆಹರು, ಗಾಂಧಿ ಕುಟುಂಬದ ವಿರುದ್ಧ ಕಿಡಿ ಕಾರಿದ ಮೋದಿ, ಈ ಕುಟುಂಬ ಎಲ್ಲಾ ರೀತಿಯಲ್ಲೂ ಸಂವಿಧಾನದ ಮೇಲೆ ದಾಳಿ ನಡೆಸಿದೆ ಎಂದರು.

ಒಂದು ಬಾರಿ ಸಂವಿಧಾನ ಘಾಸಿಗೊಳಿಸುವ ರಕ್ತದ ರುಚಿ ಕಂಡ ಈ ಕುಟುಂಬ, ಪದೇ ಪದೇ ಸಂವಿಧಾನದ ಮೇಲೆ ದಾಳಿ ನಡೆಸಿದೆ ಎಂದರು. ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭ ದಲ್ಲಿ ತೆಗೆದುಕೊಂಡ ಹಲವು ನಿರ್ಧಾರ ಗಳನ್ನು ಮೋದಿ ಉಲ್ಲೇಖಿಸಿದರು.

ಅವರ ಮುಂದಿನ ಪೀಳಿಗೆ ಸಹ ಇದೇ ಆಟದಲ್ಲಿ ತೊಡಗಿದೆ ಎಂದು ಕಾಂಗ್ರೆಸ್ (2ನೇ ಪುಟಕ್ಕೆ)

## ಸಾವರ್ಕರ್ ಸಂವಿಧಾನದ ಬದಲು ಮನಸ್ಮೃತಿ ಬಯಸಿದ್ದರು: ರಾಹುಲ್

ನವದೆಹಲಿ, ಡಿ. 14 - ಸಂವಿಧಾನದಲ್ಲಿ ಭಾರತೀಯತೆ ಇಲ್ಲ ಎಂದು ಹಿಂದುತ್ವ ಚಿಂತಕ ವಿ.ಡಿ. ಸಾವರ್ಕರ್ ಹೇಳಿದ್ದನ್ನು



ಪ್ರಸ್ತಾಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಜೆಪಿ ಸಂವಿಧಾನವನ್ನು ಸಮರ್ಥಿಸುವಾಗ ಅದು ತನ್ನ ಸರ್ವೋಚ್ಚ ನಾಯಕನ ತೇಜೋವಧೆ ಹಾಗೂ ಲೇವಡಿ ಮಾಡುತ್ತಿದೆ ಎಂದಿದ್ದಾರೆ.

ಬಿಜೆಪಿ ಹಾಗೂ ಆರ್.ಎಸ್.ಎಸ್. ಮನಸ್ಮೃತಿ ಬೆಂಬಲಿಸುತ್ತಿವೆ. ಆದರೆ ದೇಶ ಸಂವಿಧಾನದ ಆಧಾರದ ಮೇಲೆ ನಡೆಯುತ್ತದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಮಹಾಭಾರತದಲ್ಲಿ ಏಕಲವ್ಯ ಗುರುದಕ್ಷಿಣೆಯಾಗಿ ತನ್ನ ಬೆರಳು ಅರ್ಪಿಸಿದ ಪ್ರಸಂಗವನ್ನು ಪ್ರಸ್ತಾಪಿಸಿದ (2ನೇ ಪುಟಕ್ಕೆ)

# ದಾಖಲೆ ಸಹಿತ ಭ್ರಷ್ಟಾಚಾರ ಪ್ರಸ್ತಾಪ

ಬೆಂಗಳೂರು, ಡಿ. 14- ಅಧಿಕಾರಾವಧಿ ಯಲ್ಲಿ ಬಿಜೆಪಿ ಮುಖಂಡರು ಮಾಡಿರುವ ಭ್ರಷ್ಟಾಚಾರಗಳನ್ನು ಮತ್ತೆ ವಿಧಾನಸಭೆಯಲ್ಲಿ ದಾಖಲೆಗಳ ಸಹಿತ ಪ್ರಸ್ತಾಪಿಸಿ, ಪ್ರತಿಪಕ್ಷ ವನ್ನು ಕಟ್ಟಿಹಾಕಲು ನಿರ್ಧರಿಸಲಾಗಿದೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಶುಕ್ರವಾರ ರಾತ್ರಿ ಸಂಪುಟ ಸಭೆ ಮುಗಿದ ನಂತರ (4ನೇ ಪುಟಕ್ಕೆ)

**ಪ್ರತಿಪಕ್ಷವನ್ನು ಕಟ್ಟಿಹಾಕಲು ಸಿಎಂ ತಂತ್ರ**

## ಅಡಮಾನ ರಹಿತ ಕೃಷಿ ಸಾಲದ ಮೊತ್ತ 2 ಲಕ್ಷರೂ.ಗಳಿಗೆ ಹೆಚ್ಚಳ

ನವದೆಹಲಿ, ಡಿ. 14 - ರೈತರಿಗೆ ನೀಡಲಾಗುವ ಅಡಮಾನ ರಹಿತ ಸಾಲದ ಮೊತ್ತವನ್ನು 1.6 ಲಕ್ಷ ರೂ. ಗಳಿಂದ 2 ಲಕ್ಷ ರೂ.ಗಳಿಗೆ ಹೆಚ್ಚಿಸಲು ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ. ಈ ನಿರ್ಧಾರ ಜನವರಿ 1, 2025 ರಿಂದ ಜಾರಿಗೆ ಬರಲಿದ್ದು, ಇದರಿಂದ ಸಣ್ಣ ರೈತರಿಗೆ ನೆರವಾಗಲಿದೆ. (2ನೇ ಪುಟಕ್ಕೆ)

## ರಾಹುಲ್ ಲೋಕಸಭಾ ಭಾಷಣಕ್ಕೆ ಬಿಜೆಪಿ ನಾಯಕರ ಅಣಕ

ನವದೆಹಲಿ, ಡಿ. 14 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಮಾತನಾಡುವಾಗ, ದೇಹದ ತಾಪ ಏರಿಸಿಕೊಳ್ಳಲು ತಪಸ್ಸು ಮಾಡುತ್ತಾರೆ ಎಂದು ಹೇಳಿದ್ದನ್ನು ಬಿಜೆಪಿ ನಾಯಕರು ಲೇವಡಿ ಮಾಡಿದ್ದಾರೆ.

ಬಿಜೆಪಿ ಸಂಸದ ಸಂಬಿತ್ ಪಾತ್ರ ಹಾಗೂ ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು, ರಾಹುಲ್ ಗಾಂಧಿ ಭಾಷಣದ (2ನೇ ಪುಟಕ್ಕೆ)



# ಅದಾಲತ್‌ನಲ್ಲಿ ಒಂದಾದ 31 ಜೋಡಿ

ದಾವಣಗೆರೆ, ಡಿ. 14- ಇಲ್ಲಿನ ಕೌಟುಂಬಿಕ ನ್ಯಾಯಾಲಯ ದಲ್ಲಿ ವಿವಾಹ ವಿಚ್ಛೇದನ ಹಾಗೂ ಜೀವನಾಂಶಕ್ಕಾಗಿ ಪ್ರಕರಣ ದಾಖಲಾಗಿಸಿದ್ದ 28 ಜೋಡಿಗಳು ಹರಿಹರ, ಚನ್ನಗಿರಿ ಹಾಗೂ ಜಗಳೂರು ತಾಲ್ಲೂಕು ನ್ಯಾಯಾಲಯದಲ್ಲಿ ತಲಾ ಒಂದು ಜೋಡಿ ಸೇರಿ ಒಟ್ಟು 31 ಜೋಡಿಗಳು ಮತ್ತೆ ಒಂದಾಗಲು ನಿರ್ಧರಿಸಿದ್ದಾರೆ.

ನಗರದ ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ಆವರಣದಲ್ಲಿ ಒಂದಾಗಲು ನಿರ್ಧರಿಸಿದ ಜೋಡಿಗಳು ನ್ಯಾಯಾಧೀಶರು, ವಕೀಲರ ಸಮ್ಮುಖದಲ್ಲಿ ಪರಸ್ಪರ ಹಾರ ಬದಲಾಯಿಸಿಕೊಂಡು, ಸಿಹಿ ತಿನ್ನಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಹೆಚ್. ಅಣ್ಣಯ್ಯನವರ, ಗಾಳಿ ಜೀವನಕ್ಕೆ ಎಷ್ಟು ಹಿತಕರವೋ ಗಾಳಿ ಮಾತು ಅಷ್ಟೇ ಅಪಾಯ. ಹೀಗಾಗಿ ಗಾಳಿ ಮಾತುಗಳಿಗೆ ಕಿವಿಕೊಟ್ಟು ಜೀವನ ಹಾಳು ಮಾಡಿಕೊಳ್ಳಬೇಡಿ ಎಂದು ದಂಪತಿಗಳಿಗೆ ಕಿವಿ ಮಾತು ಹೇಳಿದರು.

ನಮ್ಮ ಐದೂ ಬೆರಳು ಒಂದೇ ರೀತಿ ಇರುವುದಿಲ್ಲ. ಆದರೆ ಊಟ ಮಾಡುವಾಗ ಎಲ್ಲವೂ ಒಂದಾಗುತ್ತವೆ. ಅದೇ ರೀತಿ ಪತಿ-ಪತ್ನಿ ಸ್ವಾಭಿಮಾನ, ಅಹಂಕಾರ ಬದಿಗಿಟ್ಟು ಒಂದಾಗಿ ಬಾಳಬೇಕು. ನಿಮ್ಮಲ್ಲಿ ವಿರಸ ಬಂದು, ನ್ಯಾಯಾಲಯದ (2ನೇ ಪುಟಕ್ಕೆ)

# ಬ್ಯಾಂಕ್ ವಂಚನೆ : 4 ಸಾವಿರ ಕೋಟಿ ಆಸ್ತಿ ವಾಪಸ್

**ಭೂಷಣ್ ಸ್ಟೀಲ್ ಅಂಡ್ ಪವರ್ ಕಂಪನಿ ಪ್ರಕರಣ**

ನವದೆಹಲಿ, ಡಿ. 14 - ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭೂಷಣ್ ಸ್ಟೀಲ್ ಅಂಡ್ ಪವರ್ ಕಂಪನಿಯಿಂದ ವಶಪಡಿಸಿಕೊಳ್ಳಲಾಗಿದ್ದ 4,025 ಕೋಟಿ ರೂ. ಆಸ್ತಿಗಳನ್ನು ಜಾರಿ ನಿರ್ದೇಶನಾಲಯ ಮರಳಿಸಿದೆ. ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಭೂಷಣ್ ಸ್ಟೀಲ್ ಕಂಪನಿಯು ದಿವಾಳಿ ಪ್ರಕ್ರಿಯೆಗೆ ಒಳಗಾಗಿತ್ತು. ಈ ಕಂಪನಿಯನ್ನು ಜೆ.ಎಸ್.ಡಬ್ಲ್ಯೂ ಸ್ಟೀಲ್ ವಶಕ್ಕೆ ತೆಗೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿ ಭೂಷಣ್ ಕಂಪನಿಯಿಂದ ಪಡೆಯಲಾಗಿದ್ದ 4 ಸಾವಿರ ಕೋಟಿ ರೂ.ಗಳನ್ನು ಜೆಎಸ್‌ಡಬ್ಲ್ಯೂ ಸ್ಟೀಲ್ ಕಂಪನಿಗೆ ನೀಡಲಾಗಿದೆ.

ಭೂಷಣ್ ಸ್ಟೀಲ್ ಅಂಡ್ ಪವರ್ ಮತ್ತು ಅದರ ಪ್ರವರ್ತಕರು ಬ್ಯಾಂಕುಗಳಿಗೆ ಸಾಲ ವಂಚನೆ ಮಾಡಿದ್ದಾರೆ ಹಾಗೂ ಆಸ್ತಿಗಳನ್ನು ವೈಯಕ್ತಿಕ ಹೂಡಿಕೆಗೆ ಬಳಸಿಕೊಂಡಿದ್ದಾರೆ ಎಂದು ಜಾರಿ ನಿರ್ದೇಶನಾಲಯದ ಪ್ರಕರಣ ದಾಖಲಿಸಿತ್ತು. ಆ ನಂತರ ಅಕ್ರಮ ಹಣ ತಡೆ ಕಾಯ್ದೆಯ ಅನ್ವಯ ಅದರ ಆಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು.

# ಮುಡಾಕ್ಕೆ ಬಿಡಿಎ ಮಾದರಿ ಪ್ರತ್ಯೇಕ ಕಾಯ್ದೆಗೆ ತೀರ್ಮಾನ

ಬೆಂಗಳೂರು, ಡಿ. 14- ಭ್ರಷ್ಟಾಚಾರ ಹಗರಣಗಳ ಕೇಂದ್ರ ಬಿಂದು ಆಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಬಿಡಿಎ ಮಾದರಿಯಲ್ಲಿ ಪ್ರತ್ಯೇಕ ಕಾಯ್ದೆ ರೂಪಿಸಲು ಸರ್ಕಾರ ತೀರ್ಮಾನಿಸಿದೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಿನ್ನೆ ರಾತ್ರಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವ ಸರ್ಕಾರ, ಚಳಿಗಾಲದ ಅಧಿವೇಶನದಲ್ಲೇ ಮಸೂದೆ ಮಂಡನೆ ಮಾಡಿ ಅಂಗೀಕಾರ ಪಡೆಯಲು ಸಮ್ಮತಿಸಿದೆ.

**ಭೂಸ್ವಾಧೀನ ನಂತರ ಮಾಲಿಕರಿಗೆ ಶೇ.50 ಇಲ್ಲವೇ 40ರಷ್ಟು ನಿವೇಶನ ಹಂಚಿಕೆ ಹಾಗೂ ಬೇಕಾಬಿಟ್ಟಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವ ಸ್ವಾತಂತ್ರ್ಯಕ್ಕೆ ಕಡಿವಾಣ**

ಕಾಯ್ದೆ ಜಾರಿಗೊಂಡ ನಂತರ ಭೂಸ್ವಾಧೀನ, ನಕ್ಷೆ, ನಿವೇಶನ ಹಂಚಿಕೆ ಸೇರಿದಂತೆ ಎಲ್ಲಾ ಕಾರ್ಯಗಳು ಬಿಡಿಎ ಮಾದರಿಯಲ್ಲೇ ನಡೆಯಲಿವೆ.

ಭೂಸ್ವಾಧೀನ ನಂತರ ಮಾಲೀಕರಿಗೆ ಶೇ.50 ಇಲ್ಲವೇ 40ರಷ್ಟು ನಿವೇಶನ ಹಂಚಿಕೆ ಹಾಗೂ ಬೇಕಾಬಿಟ್ಟಿ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡುವ ಸ್ವಾತಂತ್ರ್ಯಕ್ಕೆ ಕಡಿವಾಣ ಬೀಳಲಿದೆ.

ಅಷ್ಟೇ ಅಲ್ಲ, ಪ್ರಾಧಿಕಾರಕ್ಕೆ ಕೇವಲ ಮೂರರಿಂದ ನಾಲ್ಕು ಮಂದಿ ನಾಮನಿರ್ದೇಶನ ಸದಸ್ಯರಿರುತ್ತಾರೆ, ಈ ಮೊದಲು ಮುಡಾಕ್ಕೆ ನಾಮನಿರ್ದೇಶಿತರ ಸಂಖ್ಯೆ 100 ದಾಟುತ್ತಿತ್ತು.

ನಗರಾಭಿವೃದ್ಧಿ ಪ್ರಾಧಿಕಾರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮುಡಾಕ್ಕೆ ಇನ್ನು ಮುಂದೆ ಬಿಗಿಯಾದ ಕಾನೂನಿನ ಕುಣಿಕೆ ಬೀಳಲಿದೆ.

ಮುಡಾ 1987ರ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿತ್ತು, ಮಸೂದೆಗೆ ಅನುಮತಿ ದೊರೆಯುತ್ತಿದ್ದಂತೆ, ಎಲ್ಲವನ್ನೂ ಹೊಸ ಕಾಯ್ದೆಯಡಿಯಲ್ಲೇ ನಿರ್ವಹಿಸಬೇಕಾಗುತ್ತದೆ.

ಪ್ರಾಧಿಕಾರ ಇದುವರೆಗೂ ಮೈಸೂರು ನಗರದಲ್ಲಿ (4ನೇ ಪುಟಕ್ಕೆ)

## ಕೆ.ಎಸ್. ವೇದಮೂರ್ತಿ ನಿಧನ



ಹರಿಹರ ತಾಲ್ಲೂಕು ಯಲವಟ್ಟಿ ಗ್ರಾಮದ ವಾಸಿ
ಶ್ರೀಮತಿ ಕಾವ್ಯ ಹೆಚ್ .ಎನ್ ರವರ ಪತಿ

**ಕೆ.ಎಸ್. ವೇದಮೂರ್ತಿ**

(ದ್ವಿತೀಯ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ದಾವಣಗೆರೆ ಉತ್ತರ ವಲಯ)

ಇವರು ದಿನಾಂಕ 14.12.2024ರ ಶನಿವಾರ ಬೆಳಿಗ್ಗೆ 10.45ಕ್ಕೆ ನಿಧನರಾದರು. ಮೃತರಿಗೆ 45 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.12.2024ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಮೃತರ ಸ್ವಗ್ರಾಮ ಯಲವಟ್ಟಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

: ದುಃಖತಪ್ತ ಕುಟುಂಬ ವರ್ಗ :

ತಾಯಂದಿರು : ಗುರುಬಸಮ್ಮ, ನಾಗಮ್ಮ ಮತ್ತು ಮಕ್ಕಳು, ಅಳಿಯಂದಿರು ಹಾಗೂ ಕಾಳೋಳ ವಂಶಸ್ಥರು, ಯಲವಟ್ಟಿ. ಮೊ. 91640 99301, 91132 58920

ಹಾರ್ದಿಕ ಅಭಿನಂದನೆಗಳು

ದಾವಣಗೆರೆಯ ಹೆಮ್ಮೆಯ ಸುಪುತ್ರಿ ಅನ್ವಿತ.G.S 5ನೇ ತರಗತಿ SSNPS ಶಾಲೆಯವರು ಥೈಲ್ಯಾಂಡ್ ನಲ್ಲಿ ನಡೆದ ಪ್ರತಿಷ್ಠಿತ "International yogasana Championship" 2024 ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ ಮೂರನೇ ಪ್ರಶಸ್ತಿಗೆ ಪಾತ್ರರಾಗಿದ್ದಾರೆ





ಇವರು ಶ್ರೇಷ್ಠ ಸಾಧನೆಗೆ ಮತ್ತು ಮುಂದಿನ ಉತ್ತಮ ಭವಿಷ್ಯಕ್ಕೆ ಶುಭಕೋರುವವರು

"ತಂದೆ ತಾಯಿ"
ಡಾ॥ ನಂದಿನಿ ಡಾ॥ ಸುನಿಲ್ ಕುಮಾರ್, ವೈದ್ಯರು, ನಂದಿನಿ ಆಸ್ಪತ್ರೆ

"ತಾತಂದಿರು ಅಜ್ಜಿಯಂದಿರು"
ಶ್ರೀಮತಿ ವನಜಾಕ್ಷಿ ಶ್ರೀ ಶಿವಕುಮಾರ್ ಡಿ.ಜಿ ದ್ಯಾಮವ್ವ ದ್ಯಾಮೇನಹಳ್ಳಿ

ಶ್ರೀಮತಿ ರತ್ನಮ್ಮ ಶ್ರೀ ಮಲ್ಲಿಕಾರ್ಜುನಪ್ಪ (ಮಾಜಿ DHUDA ಅಧ್ಯಕ್ಷರು ಬಳ್ಳೆಕಟ್ಟೆ) ಇವರ ಮಕ್ಕಳು ಮೊಮ್ಮಕ್ಕಳು ಮತ್ತು ಅಳಿಯಂದಿರು ಕುಟುಂಬದ ಬಳಗದವರು

ದ್ಯಾಮೇನಹಳ್ಳಿ, ಕುಟುಂಬ ವಂಶಸ್ಥರು ಹಾಗೂ ಹಿತೈಷಿಗಳು

ಬಳ್ಳೆಕಟ್ಟೆ ಕುಟುಂಬ ವಂಶಸ್ಥರು ಮತ್ತು ಹಿತೈಷಿಗಳು

ಡಾ॥ ನಂದಿನಿ ಮತ್ತು ಡಾ॥ ಸುನಿಲ್ ಅವರ ಸ್ನೇಹಿತರು ಮತ್ತು ನಂದಿನಿ ಆಸ್ಪತ್ರೆ ಸಿಬ್ಬಂದಿ ವರ್ಗ

# ಕೆಎಸ್ಸಾರ್ಟಿಸಿ ಡಿಪೋ ಸ್ಥಾಪನೆಗೆ ಆಗ್ರಹ



## ಜಗಳೂರಿನಲ್ಲಿ ಕಾಲ್ನಡಿಗೆ ಜಾಥಾ

ಜಗಳೂರು, ಡಿ.14- ಜನವರಿ 16 ರಂದು ಕೆಎಸ್‌ಆರ್‌ಟಿಸಿ ಡಿಪೋ ಸ್ಥಾಪನೆಗೆ ಒತ್ತಾಯಿಸಿ, ಜಗಳೂರಿನಿಂದ ದಾವಣಗೆರೆವರೆಗೆ ಬೃಹತ್ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಪ್ರಗತಿಪರ ಸಂಘಟನೆ ಮುಖಂಡ ರಾಜಪ್ಪ ವ್ಯಾಸಗೊಂಡನಹಳ್ಳಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ಕರೆದಿದ್ದ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ದಶಕಗಳ ಕನಸಾಗಿರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಆರಂಭಿಸಲು ತಾಲ್ಲೂಕಿನಲ್ಲಿ ವಿದ್ಯಾರ್ಥಿ ಸಂಘಟನೆಗಳು, ವಿವಿಧ ಪ್ರಗತಿಪರ ಸಂಘಟನೆಗಳು ನಿರಂತರ ಹೋರಾಟ ನಡೆಸುತ್ತಾ ಬಂದಿವೆ. ಆದರೆ ಕಳೆದ ಆಡಳಿತ ಸರ್ಕಾರಗಳು ದಾವಣಗೆರೆ-ಜಗಳೂರು ಪ್ರಮುಖ ರಸ್ತೆಗಳಿಗೆ ಬಸ್ ಗಳನ್ನು ಸಂಚರಿಸುವಂತೆ ಮಾಡುವ ಮೂಲಕ ಡಿಪೋ ಸ್ಥಾಪನೆ ಮಾಡದೇ ಭರವಸೆಯೊಂದಿಗೆ ಮೂಗಿಗೆ ತುಪ್ಪ ಹಚ್ಚಿವೆ ಎಂದು ಆರೋಪಿಸಿದರು.

ಅಖಿಲ ಭಾರತ ಯುವಜನ ಒಕ್ಕೂಟದ ತಾಲ್ಲೂಕು ಸಂಚಾಲಕ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, ಬಸ್ ಡಿಪೋವಿಲ್ಲದೆ ಗ್ರಾಮೀಣ ಭಾಗದ ಸಾವಿರಾರು ವಿದ್ಯಾರ್ಥಿಗಳು ಆಟೋಗಳಲ್ಲಿ ಜೀವ ಕೈಯ್ಯಲ್ಲಿ ಹಿಡಿದು ಸಂಚರಿಸುವಂತಾಗಿದೆ.ಅಂತೆಯೇ ಸರ್ಕಾರದ ಮಹತ್ತರ ಗ್ಯಾರಂಟಿ ಯೋಜನೆಯಲ್ಲೊಂದಾದ ಶಕ್ತಿಯೋಜನೆಯಿಂದ ತಾಲ್ಲೂಕಿನ ಗ್ರಾಮೀಣ ಭಾಗದ ಮಹಿಳೆಯರು ಸಮರ್ಪಕವಾಗಿ ವಂಚಿತರಾಗಿದ್ದಾರೆ ಎಂದು ಹೇಳಿದರು.

ಡಿಎಸ್‌ಎಸ್ ಸಂಚಾಲಕ ಸತೀಶ್ ಮಲೆಮಾಚಿಕೆರೆ ಮಾತನಾಡಿ, ಕಾಲ್ನಡಿಗೆ ಜಾಥಾಕ್ಕೆ ಯಾವುದೇ ಪಕ್ಷದವರಿಂದ ದೇಣಿಗೆ ಪಡೆಯದೇ ಸಂಘಟನೆಗಳ ಸ್ವಯಂ ಖರ್ಚಿನಲ್ಲಿ ಸ್ವಾಭಿಮಾನದ ಹೋರಾಟ ನಡೆಸಲಾಗುತ್ತಿದೆ. ನ್ಯಾಯ ಸಿಗುವವರೆಗೂ ಹೋರಾಟ ನಡೆಸಲಾಗುವುದು. ಹೋರಾಟಕ್ಕೆ ಪಕ್ಷಾತೀತ ವ್ಯಾಪಕ ಬೆಂಬಲವಿದೆ ಎಂದರು.

ಇದೇ ವೇಳೆ ಹೋರಾಟದ ಕರಪತ್ರ ಬಿಡುಗಡೆಗೊಳಿಸಲಾಯಿತು.

ಈ ಸಂದರ್ಭದಲ್ಲಿ ವಕೀಲ ಆರ್. ಓಬಳೇಶ್, ಕರುನಾಡ ನವನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಮಹಾಲಿಂಗಪ್ಪ ಎಚ್.ಎಂ. ಹೊಳೆ, ಎಸ್ ಎಫ್ ಐ ರಾಜ್ಯ ಮುಖಂಡ ಅನಂತರಾಜ್, ರೈತ ಸಂಘಟನೆಯ ಭರಮಸಮುದ್ರ ಕುಮಾರ್, ಯುವ ಕರ್ನಾಟಕ ವೇದಿಕೆ ತಾಲ್ಲೂಕು ಅಧ್ಯಕ್ಷ ಮಲ್ಲಿ ಕಾರ್ಜುನ್, ಉಪಾಧ್ಯಕ್ಷ ಮರೇನಹಳ್ಳಿ ನಾಗರಾಜ್, ಚೌಡಮ್ಮ, ಮುಖಂಡರಾದ ಸತ್ಯಮೂರ್ತಿ, ಇಂದಿರಾ, ಹನುಮಂತಪ್ಪ, ರವಿಕುಮಾರ್ ಇದ್ದರು.

## ರಾಹುಲ್ ಲೋಕಸಭಾ ಭಾಷಣಕ್ಕೆ ಬಿಜೆಪಿ ನಾಯಕರ ಅಣಕ

**(3ನೇ ಪುಟದಿಂದ)** ವೀಡಿಯೋ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಲೇವಡಿ ಮಾಡಿದ್ದಾರೆ.

ಮಹಾಭಾರತದ ಏಕಲವ್ಯ ತನ್ನ ಬೆರಳನ್ನು ಗುರು ದ್ರೋಣಾಚಾರ್ಯರಿಗೆ ಅರ್ಪಿಸುವ ಕುರಿತು ರಾಹುಲ್ ಆಡಿರುವ ಮಾತಿಗೆ ಬಿಜೆಪಿ ನಾಯಕರು ಲೇವಡಿ ಮಾಡಿದ್ದಾರೆ.

ರಾಹುಲ್ ಈ ರೀತಿಯ ಜ್ಞಾನವನ್ನು ಜಾರ್ಜ್ ಸೋರೋಸ್ ಅವರಿಂದ ಪಡೆದಿದ್ದಾರೆ ಎಂದು ಮಾಳವೀಯ ಲೇವಡಿ ಮಾಡಿದ್ದಾರೆ.

ಲೋಕಸಭೆಯಲ್ಲಿ ರಾಹುಲ್ ಗಾಂಧಿ ಅವರು ಈ ಮಾತುಗಳನ್ನು ಆಡುವಾಗ ಬಿಜೆಪಿ ಸದಸ್ಯರು ಹಾಗೂ ಸಚಿವರು ನಗುತ್ತಿದ್ದುದು ಕಂಡು ಬಂತು.

# 'ಆಗ 10 ಲಕ್ಷ ಜನ ಸೇರಿದಾಗಲೂ ಇಂತಹ ಘಟನೆ ಸಂಭವಿಸಿರಲಿಲ್ಲ'

### ಹರಪನಹಳ್ಳಿ ಪಂಚಮಸಾಲಿ ಸಮಾಜದ ಅಧ್ಯಕ್ಷ ಪಿ.ಬೆಟ್ಟನಗೌಡ



ಹರಪನಹಳ್ಳಿ,ಡಿ.14- ಬಿಜೆಪಿ ಅಧಿಕಾರದ ಅವಧಿಯಲ್ಲಿ ಸುಮಾರು 10 ಲಕ್ಷ ಜನ ಸಮಾಜ ಬಾಂಧವರು ಹೋರಾಟ ಮಾಡಿದ್ದರು. ಆಗ ಯಾವುದೇ ಅಹಿತಕರ ಘಟನೆಗಳು ಸಂಭವಿಸಿರಲಿಲ್ಲ ಎಂದು ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಪಿ. ಬೆಟ್ಟನಗೌಡ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ವೀರಶೈವ ಮಹಾಸಭಾ ವತಿಯಿಂದ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮೀಸಲಾತಿ ಹೋರಾಟದ ವೇಳೆ ಮುಖ್ಯಮಂತ್ರಿಗಳು ಮಧ್ಯಸ್ಥಿಕೆ ವಹಿಸಲು ಹಿಂದೇಟು ಹಾಕಿದ್ದನ್ನು ಖಂಡಿಸಿ, ಕೆಲವರು ಸಮನ್ವಯದ ಕೊರತೆಯಿಂದ ಸಿಟ್ಟಿಗೆದ್ದಿದ್ದಾರೆ ಆಗ ಪೋಲೀಸರು ಲಾಠಿ ಚಾರ್ಜ್ ಮಾಡಿರುವುದು ಖಂಡನೀಯವೆಂದರು.

ಮಹಾಸಭಾದ ಕೂಡಲ ಸಂಗಮ ಪೀಠದ ತಾಲ್ಲೂಕು ಅಧ್ಯಕ್ಷ ಕೆ. ಪ್ರಭಾಕರ್ ಮಾತನಾಡಿ, ನಾವು ಶಾಂತ ರೀತಿಯಿಂದ ಹೋರಾಟದಲ್ಲಿ ಪಾಲ್ಗೊಂಡಿದ್ದೆವು, ಆದರೆ ನಮಗೆ ನ್ಯಾಯಯುತವಾದ ಸ್ಪಂದನೆ ಸಿಗದೆ, ಕೇವಲ ನೆಪ ಮಾತ್ರಕ್ಕೆ 3 ಜನ ಸಚಿವರುಗಳನ್ನು ಹೋರಾಟದ ಬಳಿ ಕಳುಹಿಸಿ ನಿರ್ಲಕ್ಷ್ಯ ವಹಿಸಿದ್ದು ಸಮಾಜ ಬಾಂಧವರ ಆಕ್ರೋಶಕ್ಕೆ ಕಾರಣವಾಯಿತು ಎಂದರು.

ನಮ್ಮ ಸಮಾಜದವರೇ ಆದ ವಿಜಯಾನಂದ ಕಾಶಪ್ಪನವರ್ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಸಮಾಜಕ್ಕೆ ಮೀಸಲಾತಿಯ ಕುಂಟು ನೆಪವನ್ನು ಹೇಳುತ್ತಾ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವಲ್ಲಿ ಮಾತ್ರ ಸಫಲರಾದರು. ಈಗ ಕಾಂಗ್ರೆಸ್ ಪಕ್ಷವೇ ಆಡಳಿತದಲ್ಲಿದ್ದರೂ ಸಮಾಜದ ಬಗ್ಗೆ ಯಾವುದೇ ಕಾಳಜಿಯ ಮಾತನ್ನು ಆಡದೆ, ಕೂಡಲ ಸಂಗಮ ಪೀಠದ ಸ್ವಾಮೀಜಿಗಳನ್ನೇ ದೂಷಿಸುತ್ತಿದ್ದಾರೆ ಎಂದು ಹೇಳಿದರು.

ಮುಖಂಡರುಗಳಾದ ಶಶಿಧರ್ ಪೂಜಾರ್, ಅಡವಿಹಳ್ಳಿ ಮಂಜುನಾಥ, ಚೆನ್ನನಗೌಡ, ಪ್ರಶಾಂತ್ ಪಾಟೀಲ್, ವೀರಣ್ಣ, ಮಹೇಶ್ ಪೂಜಾರ್, ಕರಿಬಸವರಾಜ್, ಸುರೇಶ್ ಶಾನಭೋಗರ, ಬಸವರಾಜ್ ಮುಲಾಲಿ, ಬಣಕಾರ್ ಜಗದೀಶ್, ಎನ್.ಜಿ ಸಿದ್ದೇಶ್ ಹಾಗೂ ಇತರರು ಉಪಸ್ಥಿತರಿದ್ದರು.

# ಇಂದಿನಿಂದ ಗದ್ದಿಗೇಶ್ವರ ಸ್ವಾಮಿ ಕಾರ್ತಿಕ, ರಥೋತ್ಸವ, ಸಾಮೂಹಿಕ ವಿವಾಹ



## ಕೂಲಂಬಿ

ಹೊನ್ನಾಳಿ ತಾಲ್ಲೂಕು ಕೂಲಂಬಿ ಗ್ರಾಮದ ಪವಾಡ ಪುರುಷ ಶ್ರೀ ಗುರು ಗದ್ದಿಗೇಶ್ವರ ಸ್ವಾಮಿಯ ಕಾರ್ತಿಕೋತ್ಸವ, ರಥೋತ್ಸವ, ಸರಳ ಸಾಮೂಹಿಕ ವಿವಾಹ ಮತ್ತು ಹೂವಿನ ಅಡ್ಡಪಲ್ಲಕ್ಕಿ ಉತ್ಸವಾದಿ ಕಾರ್ಯಕ್ರಮಗಳು ಇಂದಿನಿಂದ ನಡೆಯಲಿವೆ ಎಂದು ಕೂಲಂಬಿಯ ಶ್ರೀ ಗದ್ದಿಗೇಶ್ವರ, ಬಸವಣ್ಣ, ರಾಮೇಶ್ವರ ಸಮಿತಿಯ ಅಧ್ಯಕ್ಷ ಟಿ.ಎಸ್.ಸೋಮಶೇಖರ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 6 ಗಂಟೆಯಿಂದ ಸ್ವಾಮಿಯ ಸನ್ನಿಧಿಯಲ್ಲಿ ಉರುಳು ಸೇವೆ ಮತ್ತು ಜವಳ ಕಾರ್ಯಕ್ರಮಗಳು ನಡೆಯಲಿದ್ದು, ಅಂದು ರಾತ್ರಿ 8 ಗಂಟೆಗೆ ಕಾರ್ತಿಕೋತ್ಸವ, ಶ್ರೀ ಬಸವೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿಯ ದೇವಸ್ಥಾನದಿಂದ ದೀಪ ರಥೋತ್ಸವ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮಗಳು ನಡೆಯಲಿವೆ.

ನಾಳೆ ಸೋಮವಾರ ಬೆಳಿಗ್ಗೆ 7 ಗಂಟೆಗೆ ಸ್ವಾಮಿಯ ರಥೋತ್ಸವ ಕಾರ್ಯಕ್ರಮ ನಡೆಯಲಿದ್ದು. ಅಂದು ಬೆಳಿಗ್ಗೆ 11 ಗಂಟೆಗೆ ಸಾಮಾಹಿಕ ವಿವಾಹ ಕಾರ್ಯಕ್ರಮದಲ್ಲಿ 22 ಕ್ಕೂ ಹೆಚ್ಚು ಜೋಡಿಗಳು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಲಿದ್ದಾರೆ. ರಾತ್ರಿ 7.30 ಕ್ಕೆ ಅಡ್ಡ ಪಲ್ಲಕ್ಕಿ ಉತ್ಸವಾದಿ ಕಾರ್ಯಕ್ರಮಗಳು ನಡೆಯಲಿವೆ. ದಿನಾಂಕ 17ರ ಮಂಗಳವಾರ ರಾತ್ರಿ 8 ಗಂಟೆಗೆ ಶ್ರೀ ದುರ್ಗಾಂಬಿಕಾ ದೇವಿ ಕದಳಿ ಪೂಜೆ ನಡೆಯಲಿದೆ.

## ರಾಣೇಬೆನ್ನೂರಿಗೆ ಇಂದು ರಂಗಾಯಣ ನಿರ್ದೇಶಕ ರಾಜು ತಾಳಿಕೋಟಿ



ರಾಣೇಬೆನ್ನೂರು ತಾಲ್ಲೂಕಿನ ರಂಗ ಚೇತನ ಪರಿಶಿಷ್ಟ ಜಾತಿ ಸಂಸ್ಥೆಯು ಇಂದು ಏರ್ಪಡಿಸಿರುವ ಸಾಂಸ್ಕೃತಿಕ ರಂಗ ಸಂಗಮ ವೈಭವ, ಸಾಧಕರಿಗೆ ಪ್ರಶಸ್ತಿ ಪ್ರಧಾನ ಹಾಗೂ ಗಣ್ಯರಿಗೆ ಅಭಿನಂದನೆ ಸಮಾರಂಭಕ್ಕೆ ಧಾರವಾಡ ರಂಗಾಯಣ ನಿರ್ದೇಶಕ, ನಟ ರಾಜು ತಾಳಿಕೋಟಿ ಆಗಮಿಸಲಿದ್ದಾರೆಂದು ಸಂಸ್ಥೆಯ ಅಧ್ಯಕ್ಷ ಗಣೇಶ ಗುಡಿಗುಡಿ ತಿಳಿಸಿದ್ದಾರೆ.

ಸಂಜೆ ನಡೆಯುವ ಕಾರ್ಯಕ್ರಮವನ್ನು ಉಪಸಭಾಪತಿ ರುದ್ರಪ್ಪ ಲಮಾಣಿ ಉದ್ಘಾಟಿಸಲಿದ್ದು, ಶಾಸಕ ಪ್ರಕಾಶ ಕೋಳಿವಾಡ ಅಧ್ಯಕ್ಷತೆ ವಹಿಸುವರು. ಆರ್.ಎಂ.ಕುಬೇರಪ್ಪ, ಶ್ರೀನಿವಾಸ ಕಾಕಿ, ಎಸ್.ಎಸ್.ರಾಮಲಿಂಗಣ್ಣನವರ, ನಗರಸಭೆ ಸದಸ್ಯರಾದ ಪ್ರಕಾಶ ಬುರಡಿಕಟ್ಟಿ, ಹನುಮಂತಪ್ಪ ಹೆದ್ದೇರಿ, ಮಂಜಯ್ಯ ಚಾವಡಿ, ಕೆ.ಎಸ್.ನಾಗರಾಜ ಹಾಗೂ ಕೆ.ಸಿ.ನಾಗರಜ್ಜಿ ಮತ್ತಿತರರು ಪಾಲ್ಗೊಳ್ಳುವರು. ನಂತರ ವೃತ್ತಿ ರಂಗಭೂಮಿ ಕಲಾವಿದರಿಂದ 'ರತ್ನಮಾಂಗಲ್ಯ' ನಾಟಕ ಪ್ರದರ್ಶನ ನಡೆಯಲಿದೆ.

## ಚಿಕ್ಕಗೋಣಿಗೆರೆ ಹಾಲಿನ ಸೊಸೈಟಿ ಅಧ್ಯಕ್ಷರಾಗಿ ಎಸ್.ಬಾಬು



ಹೊನ್ನಾಳಿ, ಡಿ. 14- ತಾಲ್ಲೂಕಿನ ಚಿಕ್ಕಗೋಣಿಗೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್. ಬಾಬು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಿಡಿಓ ಎ.ಜಿ. ನವೀನ್ ಕುಮಾರ್ ಘೋಷಿಸಿದರು.

ಹಿಂದಿನ ಅಧ್ಯಕ್ಷರಾಗಿದ್ದ ಅನಂತರಾಜ್ ಇವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆದು, ಇತರೆ ಸದಸ್ಯರ್‍ಯಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಎಸ್.ಬಾಬು ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾಗಿ ಕೆ.ಪಿ.ಮಹೇಶ್ವರಪ್ಪ, ವಿಮಲಾಕ್ಷಮ್ಮ ಜಿ.ಶಾರದಮ್ಮ, ಬಿ. ಚಂದ್ರಪ್ಪ, ಎಲ್.ಕೆ.ಮಂಜಪ್ಪ, ಎಲ್.ಪಿ. ಗದ್ದಿಗೆಪ್ಪ, ಸಿ.ಪಿ.ರಾಜು, ವಿಜೇಂದ್ರ ಅವರುಗಳನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು.

## ವಾಸನ ಗ್ರಾ.ಪಂ. ಅಧ್ಯಕ್ಷರಾಗಿ ಜಿ. ದೇವರಾಜಪ್ಪ



ಮಲೇಬೆನ್ನೂರು, ಡಿ.14- ವಾಸನ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಜಿ. ದೇವರಾಜಪ್ಪ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ದೇವರಾಜಪ್ಪ ಅವರು 8 ಮತಗಳನ್ನು ಪಡೆದು ಆಯ್ಕೆಯಾದರೆ, ಎನ್. ಅಶೋಕ್ ಅವರು 5 ಮತಗಳನ್ನು ಪಡೆದು ಪರಾಭವಗೊಂಡರು. ಸಹಾಯಕ ಕೃಷಿ ನಿರ್ದೇಶಕ ನಾರನಗೌಡ ಅವರು ಚುನಾವಣಾಧಿಕಾರಿಯಾಗಿದ್ದರು. ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎನ್. ಹಳ್ಳಿಯ ಕೆ.ಬಿ. ರವಿ ಸೇರಿದಂತೆ, ಇನ್ನೂ ಅನೇಕರು ಈ ವೇಳೆ ನೂತನ ಅಧ್ಯಕ್ಷ ಜಿ. ದೇವರಾಜಪ್ಪ ಅವರನ್ನು ಅಭಿನಂದಿಸಿದರು.

## ಮಲೇಬೆನ್ನೂರು ಪುರಸಭೆಗೆ ಜಾಗ ಪರಿಶೀಲನೆಯಲ್ಲಿದೆ : ಡಿಕೆಶಿ

ಮಲೇಬೆನ್ನೂರು, ಡಿ.14- ಪಟ್ಟಣದ ನೀರಾವರಿ ಇಲಾಖೆಯ ವಸಾಹತುವಿನಲ್ಲಿ 2 ಎಕರೆ ಜಾಗವನ್ನು ಪುರಸಭೆಯ ಕಛೇರಿ ನಿರ್ಮಾಣ ಮಾಡಲು ನೀಡುವಂತೆ ದಾವಣಗೆರೆ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು, ಪರಿಶೀಲನೆಯಲ್ಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬೆಳಗಾವಿ ಅಧಿವೇಶನದಲ್ಲಿ ಶುಕ್ರವಾರ ಶಾಸಕ ಬಿ.ಪಿ. ಹರೀಶ್ ಅವರು ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದಾರೆ.

ಮಲೇಬೆನ್ನೂರಿನಲ್ಲಿ 30 ಸಾವಿರ ಜನಸಂಖ್ಯೆ ಇದ್ದು, ಪುರಸಭೆಗೆ ಸ್ವಂತ ಕಛೇರಿ ಇಲ್ಲದಿರುವುದರಿಂದ ನೀರಾವರಿ ಇಲಾಖೆಯ ಜಾಗದಲ್ಲಿ ಸುಮಾರು 2 ಎಕರೆ ಜಾಗ ನೀಡುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡುವಂತೆ ಶಾಸಕ ಹರೀಶ್ ಅವರು ಶಿವಕುಮಾರ್ ಅವರಿಗೆ ಪ್ರಶ್ನೆ ಕೇಳಿದ್ದರು.

## ಜ.1ರಿಂದ ರಾಷ್ಟ್ರೀಯ ವಾಲಿಬಾಲ್ ಪಂದ್ಯ

ದಾವಣಗೆರೆ, ಡಿ.14- ರಾಜಸ್ಥಾನದ ಜೈಪುರದಲ್ಲಿ ಬರುವ ಜನವರಿ 1ರಿಂದ 13ರ ವರೆಗೆ ಪುರುಷ ಹಾಗೂ ಮಹಿಳೆಯರ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ ನಡೆಯಲಿದೆ. ನಾಡಿದ್ದು ದಿನಾಂಕ 16ರ ಬೆಳಗ್ಗೆ 8ಕ್ಕೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ವಾಲಿಬಾಲ್ ಅಂಕಣದಲ್ಲಿ ಪಂದ್ಯಾವಳಿಗೆ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಜಿಲ್ಲೆಯ ಹಾಗೂ ಸ್ಥಳೀಯ ವಾಲಿಬಾಲ್ ಕ್ರೀಡಾಪಟುಗಳು ಭಾಗವಹಿಸಬಹುದೆಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ರೇಣುಕಾದೇವಿ ತಿಳಿಸಿದ್ದಾರೆ.

## ನಗರದ ದೀಕ್ಷಿತ್ ರಸ್ತೆಯಲ್ಲಿ ಇಂದು ಕಾರ್ತಿಕ

ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ ನಡೆಯಲಿದೆ ಎಂದು ಎನ್.ಕೆ. ಸೋಮಶೇಖರಪ್ಪ, ಕೆ.ಜಿ. ಶಿವಕುಮಾರ್ ತಿಳಿಸಿದ್ದಾರೆ.

# ಅದಾಲತ್‌ನಲ್ಲಿ ಒಂದಾದ 31 ಜೋಡಿ

**(3ನೇ ಪುಟದಿಂದ)** ಮೆಟ್ಟಿಲು ಹತ್ತಿದಾಗ ನಿಮ್ಮನ್ನು ನೋಡಿ ಖುಷಿ ಪಡುವವರೇ ಹೆಚ್ಚು. ಇದೀಗ ನೀವು ಅಂತವರ ಮುಂದೆ ಒಂದಾಗಿ ಬಾಳಿರಿ ಎಂದು ಹೇಳಿದರು.

ಶ್ರಮ ವಹಿಸಿ ಕೆಲಸ ಮಾಡಿರಿ. ಹಣ ಉಳಿತಾಯ ಮಾಡಿ. ಆದರೆ ಹೆಚ್ಚಿನ ಅತಿ ಆಸೆ ಇರಬಾರದು. ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿ ಎಂದು ಸಲಹೆ ನೀಡಿದರು. ವಿಚ್ಛೇದನಕ್ಕೆ ನಿರ್ಧರಿಸಿದ್ದ ದಂಪತಿಗಳನ್ನು ಒಂದು ಮಾಡುವಲ್ಲಿ ವಕೀಲರ ಪಾತ್ರ ಮಹತ್ವದ್ದು ಎಂದು ಇದೇ ವೇಳೆ ಶ್ಲಾಘಿಸಿದರು.

ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಶಿವಪ್ಪ ಗಂಗಪ್ಪ ಸಲಗೆರೆ ಮಾತನಾಡುತ್ತಾ, ನಮ್ಮ ದೇಶದಲ್ಲಿ ಮದುವೆಗೆ ಪವಿತ್ರ ಸ್ಥಾನವಿದೆ. ದಾಂಪತ್ಯ ಜೀವನದಲ್ಲಿ ಭಾರತ ಜಗತ್ತಿಗೇ ಮಾದರಿಯಾಗಿದೆ. ಬೇರೆ ದೇಶದಲ್ಲಿ ವಿವಾಹಗಳು ಪಾವಿತ್ರ್ಯತೆ ಉಳಿಸಿಕೊಂಡಿಲ್ಲ. ಆದರೆ ಪಾಶ್ಚಿಮಾತ್ಯ ಸಂಸ್ಕೃತಿ ಭಾರತದಲ್ಲಿಯೂ ಹೆಚ್ಚುತ್ತಿರುವುದು ಕಳವಳಕಾರಿ ಎಂದರು.

ಪತಿ-ಪತ್ನಿಯರದ್ದು ಪವಿತ್ರವಾದ ಬಂಧನವಾಗಿದೆ. ಸಂಪ್ರದಾಯ ಬಿಡದೆ ದೇಶದ ಪರಂಪರೆ ಉಳಿಸಿಕೊಂಡು ಹೋಗಬೇಕು. ಸಣ್ಣ ಪುಟ್ಟ ವ್ಯತ್ಯಾಸಗಳು ಸಹಜ. ಅದು ಉಂಡು ಮಲಗುವ ವರೆಗೆ ಮಾತ್ರ ಇರಬೇಕು. ಬದುಕಿನಲ್ಲಿ ನೆಮ್ಮದಿ ಮುಖ್ಯ. ಅದಕ್ಕಾಗಿ ದಂಪತಿಗಳು ಪರಸ್ಪರ ಅನ್ಯೋನ್ಯವಾಗಿರಬೇಕು ಎಂದರು.

ತಂದೆ-ತಾಯಿ, ಅತ್ತೆ-ಮಾವ ಯಾರೇ ಆಗಿರಲಿ ಹಿರಿಯರಿಗೆ ಗೌರವ ಕೊಡುವುದು ಮುಖ್ಯ. ನಿಮ್ಮ ಹೊಸ ಬದುಕು ಸಮಾಜಕ್ಕೆ ಮಾದರಿಯಾಗಿರಬೇಕು ಎಂದು ಒಂದಾದ ದಂಪತಿಗಳನ್ನುದ್ದೇಶಿಸಿ ಹಿತ ನುಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಹಲವಾರು ಕಾರಣಗಳಿಂದಾಗಿ ಬೇರೆಯಾಗಲು ನಿರ್ಧರಿಸಿದ್ದವರನ್ನು ಒಂದು ಮಾಡುವಲ್ಲಿ ವಕೀಲರ ಸಂಘದ ಸದಸ್ಯರು ನಿರಂತರ ಶ್ರಮ ವಹಿಸುತ್ತಿದ್ದಾರೆ ಎಂದರು.

ವಿಚ್ಛೇದನ ಕೋರಿ ಬಂದವರು ಹಾಗೂ ಅವರ ಹಿರಿಯರನ್ನು ಕರೆಯಿಸಿ, ಮನವೊಲಿಸುವ ಮೂಲಕ ಒಂದು ಮಾಡಿ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕೆಲಸವನ್ನು ವಕೀಲರು ಮಾಡುತ್ತಿದ್ದಾರೆ. ಆ ಮೂಲಕ ರಾಜ್ಯದಲ್ಲಿಯೇ ದಾವಣಗೆರೆ ಕೌಟುಂಬಿಕ ನ್ಯಾಯಾಲಯವು ಹೊಸ ಆದರ್ಶ ಹುಟ್ಟು ಹಾಕಿದೆ ಎಂದರು.

ಮಕ್ಕಳ ಸ್ನೇಹಿ ನ್ಯಾಯಾಧೀಶರಾದ ಶ್ರೀರಾಮ ನಾರಾಯಣ ಹೆಗಡೆ, ಸಂಧಾನಕಾರರಾದ ಗೀತಾ, ಹಿರಿಯ ವಕೀಲರಾದ ಜಗದೀಶ್, ಮಲ್ಲಿಕಾರ್ಜುನ್ ಕಣವಿ, ಮಹಾಬಲೇಶ್ವರ್, ಹೆಚ್.ಎನ್. ರಾಜಶೇಖರಪ್ಪ, ಮಂಜುನಾಥ್ ಇತರರು ಈ ಸಂದರ್ಭದಲ್ಲಿದ್ದರು.

## ಲೋಕ ಅದಾಲತ್‌ನಲ್ಲಿ 6492 ಜಾರಿ ಪ್ರಕರಣ ಇತ್ಯರ್ಥ

ದಾವಣಗೆರೆ, ಡಿ. 14- ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಒಟ್ಟು 6492 ಜಾರಿಯಲ್ಲಿರುವ ಪ್ರಕರಣಗಳು ಮುಕ್ತಾಯಗೊಂಡಿದ್ದು, 14,66,06,186 ಪರಿಹಾರ ಕೊಡಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ, ಹಿರಿಯ ಸಿವಿಲ್ ನ್ಯಾಯಾಧೀಶರು ಆದ ಮಹಾವೀರ ಮ.ಕರೆಣ್ಣವರ ತಿಳಿಸಿದ್ದಾರೆ.

2,46,435 ವ್ಯಾಜ್ಯಪೂರ್ವ ಪ್ರಕರಣಗಳು ಇದೇ ಅದಾಲತ್‌ನಲ್ಲಿ ಮುಕ್ತಾಯಗೊಂಡಿದ್ದು, 65,71,32,727 ರೂ. ಪರಿಹಾರ ಕೊಡಿಸಲಾಗಿದೆ.

51 ಅಪರಾಧಿಕ ಪ್ರಕರಣಗಳು, 187 ಚೆಕ್ ಅಮಾನ್ಯ ಪ್ರಕರಣ, 22 ಬ್ಯಾಂಕ್ ವಸೂಲಾತಿ ಕೇಸ್, 64 ಅಪಘಾತ ಪರಿಹಾರ ಪ್ರಕರಣ, 101 ವಿದ್ಯುತ್ ಕಳ್ಳತನ ಪ್ರಕರಣ, 9 ಅಕ್ರಮ ಮರಳು ಗಣಿಗಾರಿಕೆ ಪ್ರಕರಣ, 60 ಪಾಲು ವಿಭಾಗಕ್ಕಾಗಿ ದಾಖಲಿಸಿದ ದಾವೆಗಳು, 128 ಜಾರಿ ಅರ್ಜಿಗಳು ಸೇರಿದಂತೆ ಒಟ್ಟು 6,492 ಜಾರಿಯಲ್ಲಿದ್ದ ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದವರು ಮಾಹಿತಿ ನೀಡಿದ್ದಾರೆ.

ವ್ಯಾಜ್ಯ ಪೂರ್ವ ಪ್ರಕರಣಗಳಾದ ಬ್ಯಾಂಕ್ ಸಾಲ ವಸೂಲಾತಿ, ಕಾರ್ಮಿಕ ವ್ಯಾಜ್ಯಗಳು, ನೀರಿನ ಬಾಕಿ ವಸೂಲಾತಿ, ಕಂದಾಯ, ಟ್ರಾಫಿಕ್ ಪ್ರಕರಣ ಸೇರಿದಂತೆ ಒಟ್ಟಾರೆ 2,46,435 ಪ್ರಕರಣಗಳು ಇತ್ಯರ್ಥಗೊಂಡಿದ್ದು, 65,71,32,727 ಹಣ ವಸೂಲಾಗಿರುತ್ತದೆ ಎಂದು ಹೇಳಿದ್ದಾರೆ.

## ಕೃಷಿ ಸಾಲದ ಮೊತ್ತ 2 ಲಕ್ಷಗಳಿಗೆ ಹೆಚ್ಚಳ

**(3ನೇ ಪುಟದಿಂದ)** ಕೃಷಿ ಹೂಡಿಕೆಗಳ ವೆಚ್ಚ ಹೆಚ್ಚಾಗಿರುವುದು ಹಾಗೂ ರೈತರಿಗೆ ಸುಲಭವಾಗಿ ಸಾಲ ದೊರೆಯಬೇಕು ಎಂಬ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ. ಈ ಕ್ರಮದಿಂದ ಶೇ. 86ರಷ್ಟು ರೈತರಿಗೆ ನೆರವು ಸಿಗಲಿದೆ ಎಂದು ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಾಲದ ಮಿತಿ ಹೆಚ್ಚಳದ ಕುರಿತ ಮಾರ್ಗಸೂಚಿಗಳನ್ನು ತ್ವರಿತವಾಗಿ ಜಾರಿಗೆ ತರಬೇಕು ಎಂದು ಬ್ಯಾಂಕುಗಳಿಗೆ ಸೂಚನೆ ನೀಡಲಾಗಿದೆ ಹಾಗೂ ಈ ಸಾಲಮಿತಿ ಹೆಚ್ಚಳದ ಕುರಿತು ಅರಿವು ಮೂಡಿಸಬೇಕು ಎಂದೂ ತಿಳಿಸಲಾಗಿದೆ.

# ಜಿಎಂಐಟಿಯಲ್ಲಿ ಆನ್‌ಲೈನ್ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ



ದಾವಣಗೆರೆ, ಡಿ. 14- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ನೇತೃತ್ವದಲ್ಲಿ ವಿವಿಧ ಕಾಲೇಜಿನ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳಿಗಾಗಿ ಒಂದು ವಾರಗಳ ಆನ್‌ಲೈನ್ ಮೂಲಕ 'ಅಡ್ವಾನ್ಸಿಂಗ್ ಫ್ರಾಂಟಿಯರ್ಸ್ ಇನ್ ಸೂಪರ್ ಕಂಪ್ಯೂಟಿಂಗ್, ಎಐ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ : ಇನ್ನೋವೇಷನ್, ಅಪ್ಲಿಕೇಷನ್ ಅಂಡ್ ಇಂಟಗ್ರೇಷನ್'ನ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ ಹಮ್ಮಿಕೊಳ್ಳಲಾಗಿತ್ತು.

ಜಿಎಂ ಯುನಿವರ್ಸಿಟಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಆನ್‌ಲೈನ್ ಮೂಲಕ ಜಿಎಂ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್.ಆರ್. ಶಂಕಪಾಲ್ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಮುಂದಿನ ದಿನಗಳಲ್ಲಿ ಈ ತಂತ್ರಜ್ಞಾನದ ಅನೇಕ ಉಪಯೋಗಗಳು ಮತ್ತು ಅದರ ಉಪಕರಣಗಳನ್ನು ಹೇಗೆ ಬೋಧನೆಯಲ್ಲಿ ಅಳವಡಿಸಿಕೊಳ್ಳಬಹುದು ಎಂಬುದರ ಬಗ್ಗೆ ತಿಳಿಸಿದರು.

ಕಾರ್ಯಾಗಾರದಲ್ಲಿ ಜಿಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಅಡ್ವಾನ್ಸಿಂಗ್ ಫ್ರಾಂಟಿಯರ್ಸ್ ಇನ್ ಸೂಪರ್ ಕಂಪ್ಯೂಟಿಂಗ್, ಎಐ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್'ನ ಹಲವು ಮಹತ್ತರ ಉಪಯೋಗಗಳ ಬಗ್ಗೆ ಮಾಹಿತಿ ನೀಡಿದರು.

ಸಮಾರಂಭದಲ್ಲಿ ಜಿಎಂ ವಿಶ್ವ ವಿದ್ಯಾಲಯದ ಸಹ ಕುಲಪತಿ ಡಾ. ಹೆಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಬಿ.ಎಸ್. ಸುನೀಲ್ ಕುಮಾರ್, ಕಾರ್ಯಾಗಾರದ ಸಹ-ಸಂಯೋಜಕರಾದ ಪ್ರೊ. ಜಿ.ಟಿ. ಅಶ್ವಿನಿ, ತರಬೇತಿ ಹಾಗು ಉದ್ಯೋಗ ವಿಭಾಗದ ನಿರ್ದೇಶಕರಾದ ಪ್ರೊ. ಟಿ.ಆರ್. ತೇಜಸ್ವಿ ಕಟ್ಟಿಮನಿ ಮತ್ತು ಇತರರು ಉಪಸ್ಥಿತರಿದ್ದರು.

ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ 7ನೇ ಸೆಮಿಸ್ಟರ್ ವಿದ್ಯಾರ್ಥಿನಿ ಹೆಚ್.ಎಂ. ಲಕ್ಷ್ಮಿ ಪ್ರಾರ್ಥಿಸಿದರು. ಜಿಎಂ ಯುನಿವರ್ಸಿಟಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಡಾ. ಟಿ.ಎಂ. ವೀರಗಂಗಾಧರ ಸ್ವಾಮಿ ಸ್ವಾಗತಿಸಿದರು. ಇನ್ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು ಹಾಗು ಕಾರ್ಯಾಗಾರದ ಸಂಚಾಲಕ ಮತ್ತು ಸಂಯೋಜಕರಾದ ಡಾ. ನೀಲಾಂಬಿಕೆ ಎಸ್. ಕಾರ್ಯಾಗಾರದ ಬಗ್ಗೆ ಮಾಹಿತಿ ನೀಡಿದರು. ಬಿ.ಬಿ. ಸುಷ್ಮಾ ನಿರೂಪಿಸಿದರು. ಪ್ರೊ.

# ನಮ್ಮ ಸರ್ಕಾರ ಸಂವಿಧಾನ ಬಲಪಡಿಸಿದೆ

**(3ನೇ ಪುಟದಿಂದ)** ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ವಾದ್ರ ವಿರುದ್ಧ ಟೀಕಿಸಿದರು.

ತಾವು ಗುಜರಾತ್ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಸಂವಿಧಾನ ಅಂಗೀಕಾರಗೊಂಡು 60 ವರ್ಷ ತುಂಬಿದ ಸಮಾರಂಭವನ್ನು ಆಚರಿಸಿದ್ದನ್ನು ನೆನಪಿಸಿಕೊಂಡ ಮೋದಿ, ಸಂವಿಧಾನದ ಪ್ರತಿಯನ್ನು ಆನೆಯ ಮೇಲಿರಿಸಿ ಮೆರವಣಿಗೆ ಮಾಡಲಾಗಿತ್ತು. ಸಂವಿಧಾನವನ್ನು ಗೌರವಿಸಿ, ನಾನು ಬರಿಗಾಲಿನಲ್ಲಿ ಮೆರವಣಿಗೆಯಲ್ಲಿ ಭಾಗಿಯಾಗಿದ್ದೆ ಎಂದು ತಿಳಿಸಿದರು.

ಜವಾಹರಲಾಲ್ ನೆಹರು ಪ್ರಧಾನಮಂತ್ರಿಯಾಗಿದ್ದಾಗ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲು ಸಂವಿಧಾನಕ್ಕೆ ತಿದ್ದುಪಡಿ ತಂದಿದ್ದರು. ಅವರ ಪುತ್ರಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿದ್ದರು. ಪ್ರಧಾನಮಂತ್ರಿ ಸ್ಥಾನ ಉಳಿಸಿಕೊಳ್ಳಲು ಅವರು ಸಂವಿಧಾನ ತಿರುಚಿದ್ದರು ಎಂದು ಮೋದಿ ಟೀಕಿಸಿದರು.

ನಂತರ ಅಧಿಕಾರಕ್ಕೆ ಬಂದ ರಾಜೀವ್ ಗಾಂಧಿ ಅವರೂ ಸಹ ಸಂವಿಧಾನಕ್ಕೆ ತಿದ್ದುಪಡಿ ತಂದಿದ್ದರು.ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ಕಳಂಕ ತೊಳೆದು ಹಾಕಲಾಗದು ಎಂದವರು ಹೇಳಿದರು.

ಮನಮೋಹನ್ ಸಿಂಗ್ ಅವರ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಉದ್ಧಟ ವ್ಯಕ್ತಿ ಒಬ್ಬರು ಸಂಪುಟ ತೆಗೆದುಕೊಂಡ ನಿರ್ಧಾರವನ್ನು ಹರಿದು ಹಾಕಿದ್ದರು ಎಂದು ಪರೋಕ್ಷವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಮೋದಿ ಕಿಡಿಕಾರಿದರು.

ಯುಪಿಎ ಆಡಳಿತದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನೇತೃತ್ವದ ರಾಷ್ಟ್ರೀಯ ಸಲಹಾ ಮಂಡಳಿಯು ಸಂಪುಟಕ್ಕಿಂತ ಮೇಲಿನ ಹಂತದಲ್ಲಿ ಕಾರ್ಯನಿರ್ವಹಿಸಿತ್ತು ಎಂದೂ ಮೋದಿ ಆರೋಪಿಸಿದರು.

ತಮ್ಮ ಸರ್ಕಾರ ಐಕ್ಯತೆಗಾಗಿ 370ನೇ ವಿಧಿ ರದ್ದುಗೊಳಿಸಿತು ಹಾಗೂ ಒಂದು ದೇಶ ಒಂದು ತೆರಿಗೆ ಪದ್ಧತಿಗಾಗಿ ಜಿಎಸ್‌ಟಿ ಜಾರಿಗೆ ತಂದಿತು ಎಂದು ಪ್ರಧಾನಿ ತಿಳಿಸಿದರು.

## ಸಾವರ್ಕರ್ ಸಂವಿಧಾನದ ಬದಲು ಮನಸ್ಮೃತಿ ಬಯಸಿದ್ದರು: ರಾಹುಲ್

**(3ನೇ ಪುಟದಿಂದ)** ಅವರು, ಅದೇ ರೀತಿ ಅದಾನಿ ಸಮೂಹದ ಏಕಸ್ವಾಮ್ಯ ಹಲವು ವಲಯಗಳಲ್ಲಿ ಹಾನಿ ಮಾಡುತ್ತಿದೆ ಎಂದರು.

ಸೈನ್ಯ ಸೇರ್ಪಡೆಯ ಅಗ್ನಿಪಥ ಯೋಜನೆ, ರೈತರ ಮೇಲೆ ಅಶ್ರುವಾಯು ಸಿಡಿಸಿರುವುದು, ನಾಗರಿಕ ಸೇವೆಗಳಲ್ಲಿ ನೇರ ನೇಮಕಾತಿ ಹಾಗೂ ಪ್ರಶ್ನೆ ಪತ್ರಿಕೆಗಳ ಸೋರಿಕೆ ವಿಷಯಗಳನ್ನು ಪ್ರಸ್ತಾಪಿಸಿದ ರಾಹುಲ್ ಗಾಂಧಿ, ಸರ್ಕಾರ ಯುವ ಪೀಳಿಗೆಯ ಹೆಬ್ಬೆರಳು ಕತ್ತರಿಸುತ್ತಿದೆ ಎಂದು ಆರೋಪಿಸಿದರು.

ಸಂವಿಧಾನ ರೂಪುಗೊಂಡು 75 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ಚರ್ಚೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸಂವಿಧಾನ ಪ್ರತಿಯೊಬ್ಬ ಬಡ ವ್ಯಕ್ತಿಯನ್ನು ರಕ್ಷಿಸುತ್ತಿದೆ. ಆದರೆ ಬಿಜೆಪಿ ಸಂವಿಧಾನದ ಮೇಲೆ ದಾಳಿ ನಡೆಸುತ್ತಿದೆ ಎಂದು ಪತಿಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ದೇಶದಲ್ಲಿ ಜಾತಿಗಣತಿ ನಡೆಸಲಾಗುವುದು ಹಾಗೂ ಮೀಸಲಾತಿ ಮೇಲಿನ ಶೇಕಡ 50ರ ಮಿತಿ ತೆರವುಗೊಳಿಸಲಾಗುವುದು. ಇದರಿಂದ ದೇಶದಲ್ಲಿ ಹೊಸ ರೀತಿಯ ಅಭಿವೃದ್ಧಿ ಆರಂಭವಾಗಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

# ವಾರ ಭವಿಷ್ಯ

**ದಿನಾಂಕ : 15.12.2024 ರಿಂದ 21.12.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಈ ವಾರ ಹಣಕಾಸಿನ ವಿಚಾರದಲ್ಲಿ ತುಸು ಮುಂಜಾಗ್ರತೆ ವಹಿಸದಲ್ಲಿ ಮಾತ್ರ ತುಸು ನೆಮ್ಮದಿಯಿಂದಿರಲು ಸಾಧ್ಯ. ಇಲ್ಲವಾದಲ್ಲಿ ಕಂಡವರ ಮುಂದೆ ಕೈಯೊಡ್ಡ ಬೇಕಾದೀತು ವ್ಯಾಪಾರ, ವ್ಯವಹಾರದಲ್ಲಿ ಕೆಲವೊಮ್ಮೆ ನೀವು ತೆಗೆದುಕೊಳ್ಳುವ ನಿರ್ಧಾರಗಳು ನಿಮಗೇ ಮುಳುವಾಗಬಹುದು ಹಾಗೆಂದ ಮಾತ್ರ ಆದಾಯಕ್ಕೇನೂ ಕೊರತೆಯಿಲ್ಲ ವಿತರಣೆ ಸರಿಯಾಗಿರಬೇಕಷ್ಟೆ ಅತಿಯಾದ ಬೋಜನ ಕೂಟಗಳಿಗೊಂದು ಕಡಿವಾಣ ಹಾಕದೇ ಹೋದಲ್ಲಿ ಉದರ ಸಂಬಂಧಿ ಆರೋಗ್ಯ ಸಮಸ್ಯೆ ತಪ್ಪಿದ್ದಲ್ಲ ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಖಂಡಿತಾ ಬೇಡ.ಗೋ ಸೇವೆಮಾಡಿ. ಭಾನು, ಮಂಗಳ, ಗುರು ಶುಭದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಈ ವಾರ ನಿಮ್ಮ ನಡಾವಳಿಯಲ್ಲಿ ಅನಿರೀಕ್ಷಿತ ಬದಲಾವಣೆಯೊಂದು ಕಂಡುಬರಲಿದ್ದು, ಇದು ಎಲ್ಲರಿಗೂ ಅಚ್ಚರಿಯನ್ನುಂಟು ಮಾಡಲಿದೆ. ಮೊದಲ ಬಾರಿ ಗರ್ಭಿಣೆಯಾದವರು ತುಸು ಎಚ್ಚರದಿಂದಿರುವುದು ಮೇಲು ಕೆಲಸ, ಕಾರ್ಯಗಳಲ್ಲಿ ಒರಟುತನ ಬೇಡ. ಮಡದಿ ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬರಲಿದೆ, ಜೊತೆಗೆ ವೈದ್ಯಕೀಯ ವೆಚ್ಚ ತುಸು ಹೆಚ್ಚೇ ಆಗಲಿದೆ. ಹಾಗೆಂದ ಮಾತ್ರಕ್ಕೆ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಕೆಲವರಿಗೆ ಪಾಲುದಾರಿಕೆ ವ್ಯವಹಾರದಲ್ಲಿ ಅನಿರೀಕ್ಷಿತವಾಗಿ ನಿರೀಕ್ಷೆಗಿಂತಲೂ ಹೆಚ್ಚಿನ ಲಾಭಾಂಶ ಬರಲಿದೆ. ಈ ಸಂದರ್ಭದಲ್ಲಿ ಉಳಿತಾಯದ ಬಗ್ಗೆ ಯೋಚಿಸುವುದು ಮೇಲು. ಗುರು, ಶುಕ್ರ, ಶನಿ ಶುಭದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಹಣಕಾಸಿನ ನಿರ್ವಣೇ ವಿಚಾರದಲ್ಲಿ ನಿಮ್ಮನ್ನು ಮೀರಿಸುವವರು ಈ ವಾರ ಯಾರೂ ಇಲ್ಲ ಹೊಸದಾಗಿ ಸಂಸಾರ ಆರಂಭಿಸಿರುವವರು ಹೊಂದಾಣಿಕೆ ಜೀವನ ನಡೆಸುವುದು ಮೇಲು. ಬಂಧುಗಳ ವೈಯುಕ್ತಿಕ ವ್ಯವಹಾರಗಳಲ್ಲಿ ನಿಮ್ಮ ಪ್ರವೇಶಬೇಡ. ಇಲ್ಲವಾದಲ್ಲಿ ಧನ ಅಥವಾ ಮಾನ ಇಲ್ಲವೇ ಎರಡೂ ಹಾನಿಯಾಗಬಹುದು, ಯುವಜನರು ಸ್ವಪ್ರತಿಷ್ಠೆ ಬಿಟ್ಟಲ್ಲಿ ಮಾತ್ರ ಬದುಕಿನಲ್ಲಿ ಯಶಸ್ಸು ಕಾಣಲು ಸಾಧ್ಯ. ವಿದ್ಯಾರ್ಥಿಗಳು ಅಧ್ಯಯನವನ್ನು ತುಸು ಗಂಭೀರವಾಗಿ ಪರಿಗಣಿಸುವುದು ಉತ್ತಮ. ವಿದೇಶೀ ವ್ಯವಹಾರಗಳಲ್ಲಿ ಹೂಡಿಕೆ ಮಾಡಲು ಹೋಗಬೇಡಿ. ಅನ್ನದಾನಮಾಡಿ. ಭಾನು, ಮಂಗಳ, ಬುಧ ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಕಳೆದ ವಾರ ಬಲು ಹುರುಪಿನಿಂದ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡ ನಿಮಗೆ ಈ ವಾರ ದೇಹದಲ್ಲಿ ನಿಶ್ಯಕ್ತಿ ಕಾಣಿಸಿಕೊಳ್ಳಲಿದೆ. ದಣಿದ ದೇಹಕ್ಕೆ ತುಸು ವಿಶ್ರಾಂತಿ ಕೊಡುವುದು ಮೇಲು-ಮಧ್ಯಗತಿ ಆದಾಯ ನಿತ್ಯ, ನೈಮಿತ್ತಿಕಗಳಿಗೆ ಸಾಕಾಗದೇ ಹೋಗಬಹುದು, ಸರ್ಕಾರದಿಂದ ಬರಬೇಕಾಗಿರುವ ಪಿಂಚಣಿ ಹಣ ಇಷ್ಟರಲ್ಲೇ ಕೈ ಸೇರಲಿದೆ. ಮಡದಿ ಮಕ್ಕಳು ಕೊಡಲಿರುವ ಸಲಹೆಗಳು ಮುಂದೆ ಪ್ರಯೋಜನಕ್ಕೆ ಬರಲಿವೆ, ಮಗನ ಆದಾಯದಲ್ಲಿ ತುಸು ಹೆಚ್ಚಳ ಕಂಡು ಬರಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ, ಇಷ್ಟರಲ್ಲೇ ಕೂಡಿಬರಲಿದೆ, ಕೊಟ್ಟ ಸಾಲವನ್ನು ಕೇಳದೇ, ಹೋದಲ್ಲಿ ತೊಂದರೆಯಾದೀತು. ಸೋಮ, ಬುಧ ಗುರು. ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನೀವು ಪಡುವ ಶ್ರಮದ ಸುಖವನ್ನು ಬೇರೆಯವರು ಅನುಭವಿಸುತ್ತಾರೆಯೇ ಹೊರತು ಶ್ರಮಪಡುವುದೇ ನಿಮ್ಮ ನಸೀಬಾಗಲಿದೆ. ಆದಾಯದಲ್ಲಿ ಉಂಟಾಗುವ ಏರಿಳಿತಗಳು ನಿಮ್ಮ ಲೆಕ್ಕಾಚಾರವನ್ನೇ ಬುಡಮೇಲು ಮಾಡಲಿದೆ. ಮಹಿಳೆಯರು ಆಡಬಹುದಾದ ಮಾತಿನಿಂದಾಗಿ ಮನೆಯಲ್ಲಿ ಅಶಾಂತಿ ಮೂಡಲಿದೆ, ಇದನ್ನು ಸಾಧ್ಯವಾದಷ್ಟು ತಡೆಯಲು ಪ್ರಯತ್ನಿಸಿ, ಗೆಳೆಯರೊಂದಿಗೆ ವೈಮನಸ್ಯ ಬೇಡ, ಅವರ ಸಲಹೆಗಳು ನಿಮಗೆ ಅತ್ಯಮೂಲ್ಯ ಎಂಬುದನ್ನು ಮರೆಯಬೇಡಿ. ಪ್ರಸೂತಿ ತಜ್ಞರು ತಮ್ಮ ಕಾರ್ಯನಿರ್ವಹಣೆ ಕಾಲದಲ್ಲಿ ಹೆಚ್ಚಿನ ನಿಗಾವಹಿಸುವುದು ಮೇಲು, ಗುರುಗಳನ್ನು ಆರಾಧಿಸಿರಿ. ಭಾನು, ಮಂಗಳ, ಬುಧ ಶುಭದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಧನ ಸಂಗ್ರಹ ಮಾಡುವ ನಿಟ್ಟಿನಲ್ಲಿ ನೀವು ತೋರಲಿರುವ ಜಿಪುಣತನ ಬೇರೆಯರ ಅಪಹಾಸ್ಯಕ್ಕೆ ಕಾರಣವಾಗಲಿದೆ, ಕುಟುಂಬಕ್ಕೆ ಸಂಬಂಧಿಸಿದ ಕೆಲವು ವಿಷಯಗಳ ಬಗ್ಗೆ ತಿಳಿದೂ ತಿಳಿಯದಂತಿರುವುದು ಮೇಲು, ಇಲ್ಲವಾದಲ್ಲಿ ಮನಃ ಶಾಂತಿ ಕಳೆದುಕೊಳ್ಳಬೇಕಾದೀತು. ಆದಾಯವು ಮಧ್ಯ ಗತಿಯಲ್ಲಿರುವುದರಿಂದ ಹೊಸ ಯೋಜನೆಗಳಿಗೆ ಚಾಲನೆ ಕೊಡಲು ಹೋಗಬೇಡಿ, ಮನೆಯ ಸದಸ್ಯರಿಂದಲೇ ನಿಮ್ಮ ವಿರುದ್ಧ ಆಪಾದನೆಗಳು ಕೇಳಿಬರಬಹುದು, ಸದ್ಯದ ಪರಿಸ್ಥಿಯಲ್ಲಿ ಸ್ಥಿತ ಪ್ರಜ್ಞನಂತಿರುವುದು ಮೇಲು ಹೊಸದಾಗಿ ನೌಕರಿ ಸೇರಿದವರಿಗೆ ಹಿರಿಯ ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ದೊರೆಯಲಿದೆ. ಮಂಗಳ, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ತಮ್ಮ ತಪ್ಪಿನಿಂದಲೇ ಹತಾಶರಾದ ವೈರಿಗಳನ್ನು ನೋಡಿ ಮನಸ್ಸಿನಲ್ಲೇ ಆನಂದ ಪಡುವಿರಿ, ಜೊತೆಗೆ ಅವರನ್ನು ಗೆದ್ದಂತಹ ಮನೋಭಾವ ಮೂಡಲಿದೆ, ಮಧ್ಯಗತಿಯ ಆದಾಯದಿಂದ ದೈನಂದಿನ ಬದುಕು ಸಾಗಲಿದೆಯೇ ಹೊರತು, ಉಳಿತಾಯ ಸಾಧ್ಯವಾಗದೇ ಹೋಗಬಹುದು, ಬಂಧುಗಳೊಂದಿಗೆ ನೀವು ನಡೆದು ಕೊಳ್ಳುವ ರೀತಿ ಕೆಲವೊಮ್ಮೆ ನಿಮಗೇ ಮುಜುಗರವಾಗಲಿದೆ, ಸಂಸಾರದಲ್ಲಿ ನೆಮ್ಮದಿ, ಶಾಂತಿ ಕಂಡು ಬರಲಿದೆ, ಸೋದರನ ವಿವಾಹಕ್ಕೆ ಬಹುಶ್ರಮಪಡಬೇಕಾದೀತು ನಿಮ್ಮ ಬಾಳ ಸಂಗಾತಿಗೆ ಉತ್ತಮ ವೇತನದ ನೌಕರಿ ಸಿಗಲಿದೆ ಕುಲದೇವತಾರಾಧನೆ ಮಾಡಿರಿ, ಗೋ ಸೇವೆ ಮಾಡಿ. ಗುರು, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕ್ರಮೇಣವಾಗಿ ಹೆಚ್ಚುತ್ತಿರುವ ಆದಾಯ ನಿಮ್ಮ ಎಲ್ಲಾ ಅಗತ್ಯಗಳನ್ನು ಪೂರೈಸಲಿವೆ. ಹಾಗೆಂದ ಮಾತ್ರಕ್ಕೆ ದುಂದು ವೆಚ್ಚಸಲ್ಲದು, ನೀವು ಮಾಡಲಿರುವ ಸಾಮಾಜಿಕ ಕೆಲಸಗಳಿಗೆ ಜನರಿಂದ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ, ಸಾಂಪ್ರದಾಯಿಕ ಕೃಷಿಯಲ್ಲಿ ತೊಡಗಿ ಕೊಂಡವರಿಗೆ ಹೆಚ್ಚಿನ ಲಾಭವಾಗಲಿದೆ, ವಿಷಯದ ಅರಿವಿಲ್ಲದೇ ಮಾತನಾಡಲು ಹೋದಲ್ಲಿ ಅಪಹಾಸ್ಯಕ್ಕೀಡಾಗುವಿರಿ. ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡುವವರಿಗೆ ಹೆಚ್ಚಿನ ಲಾಭವಿಲ್ಲದಿದ್ದರೂ ಸಾಕಷ್ಟು ಆದಾಯವಾಗಲಿದೆ. ಕೆಲವು ಕೌಟುಂಬಿಕ ನಿರ್ಧಾರಗಳ ಬಗ್ಗೆ ಹಿರಿಯರ ಅಣತಿಯಂತೆ ನಡೆದುಕೊಳ್ಳುವುದು ಮೇಲು. ಭಾನು, ಮಂಗಳ, ಗುರು, ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಆತ್ಮಾಭಿಮಾನ ಅಥವಾ ಸ್ವಾಭಿಮಾನಕ್ಕೆ ಹೆಚ್ಚು ಬೆಲೆ ಕೊಡುವ ನಿಮ್ಮನ್ನು ಇಡೀ ಸಮಾಜವೇ ಗೌರವಿಸಲಿದೆ, ಆದರೆ ಅದು ದುರಭಿಮಾನಕ್ಕೆ ತಿರುಗಬಾರದಷ್ಟೇ. ಅಗತ್ಯಕ್ಕೆ ತಕ್ಕಂತೆ ಆದಾಯವಿರುವುದರಿಂದ ಹೆಚ್ಚಿನ ನಿರೀಕ್ಷೆಬೇಡ, ವಿದೇಶದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಹೇರಳ ಲಾಭವಾಗಲಿದೆ, ಸರ್ಕಾರದಿಂದಾಗ ಬೇಕಾಗಿರುವ ಕೆಲಸಗಳು ನಿಧಾನವಾದರೂ ಚಿಂತಿಸಬೇಡಿ, ನಿಧಾನವಾದಷ್ಟೂ ನಿಮಗೇ ಹೆಚ್ಚಿನ ಲಾಭವಾಗಲಿದೆ, ಸಂಗಾತಿಯ ಆರೋಗ್ಯ ನಿಮಿತ್ಯ ತುಸು ಹೆಚ್ಚೇ ಎನ್ನಬಹುದಾದ ವೆಚ್ಚ ಅನಿವಾರ್ಯವಾಗಲಿದೆ, ಆಸ್ತಿ ಖರೀದಿ ವಿಚಾರವನ್ನು ಸದ್ಯದ ಮಟ್ಟಿಗೆ ಮುಂದೂಡು ವುದು ಲೇಸು. ಭಾನು, ಸೋಮ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಆದಾಯದಲ್ಲಿ ತುಸು ಮಟ್ಟಿಗೆ ಏರಿಕೆಯಾದರೂ ಆಗಬಹುದಾದ ಖರ್ಚು ವೆಚ್ಚಗಳಿಗೆ ಸರಿ ಹೋಗಲಿದೆ, ಆಗಬೇಕಾಗಿರುವ ಶುಭ ಕಾರ್ಯಗಳಿಗೆ ಬಂಧುಗಳಿಂದಲೇ ಮತ್ತೆ ಮತ್ತೆ ವಿಘ್ನಗಳುಂಟಾಗಲಿದೆ, ಮಾಡಬೇಕಾಗಿರುವ ಕಾರ್ಯಗಳಿಗೆ ನಿಮ್ಮಿಂದ ಹೆಚ್ಚಿನ ದೇಣಿಗೆ ಸಂದಾಯವಾಗಲಿದೆ, ರಾಜಕಾರಣಿಗಳು ಪಕ್ಷದ ಧುರೀಣರ ಮಾತುಗಳನ್ನು ನಂಬಿಯೂ ನಂಬದಂತಿರುವುದು ಮೇಲು, ಊಟೋಪಚಾರ ವಿಚಾರದಲ್ಲಿ ಉದಾಸೀನತೆ ಸಲ್ಲದು ಕರಿದ ಮಸಾಲೆ ಪದಾರ್ಥಗಳ ಅತಿ ಸೇವನೆ ಆರೋಗ್ಯ ದೃಷ್ಟಿಯಿಂದ ಹಾನಿಕರ ಸಾಧು ಸಂತರ ದರ್ಶನವಾಗಲಿದೆ, ಗೋ ಸೇವೆಮಾಡಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮಾಡಲೇ ಬೇಕಾಗಿರುವ ಕೆಲಸಗಳ ವಿಚಾರದಲ್ಲಿ ಚಿತ್ತ ಚಾಂಚಲ್ಯ ಬೇಡ. ಗಮನವಿಟ್ಟು ಕೆಲಸ ಮಾಡದೇ ಹೋದಲ್ಲಿ ನೀವು ಇಷ್ಟು ದಿನ ಪಟ್ಟ ಶ್ರಮವೆಲ್ಲವೂ ವ್ಯರ್ಥವಾದೀತು. ವಿದೇಶದಲ್ಲಿ ಹೂಡಿರುವ ಬಂಡವಾಳ ಇನ್ನು ಮುಂದೆ ಲಾಭ ತರಲಿದೆ, ವೈಯಕ್ತಿಕ ವಿಚಾರವನ್ನು ಆತ್ಮೀಯೇತರರಲ್ಲಿ ಹೇಳಿಕೊಳ್ಳುವುದರಿಂದ ನೀವೇ ನಗೆ ಪಾಟಲೀಡಾಗುವಿರಿ. ಬಂಧುಗಳೊಂದಿಗೆ ಆಡಲಿರುವ ಮಾತಿನ ಮೇಲೆ ಹಿಡಿತವಿರಲಿ, ಕರಿದ ಪದಾರ್ಥಗಳ ಅತಿ ಸೇವನೆಯಿಂದಾಗಿ ತುರಿಕೆ ಮೊದಲಾದ ಚರ್ಮ ಸಂಬಂಧಿ ಖಾಯಿಲೆಗಳು ನಿಮ್ಮನ್ನು ಬಾಧಿಸಬಹುದು, ಆದಾಯದ ಮೂಲದಲ್ಲಿ ಕ್ರಮೇಣ ಹೆಚ್ಚಳ ಕಂಡುಬರಲಿದೆ. ಭಾನು, ಗುರು, ಶನಿ, ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮದೇ ವೈಯುಕ್ತಿಕ ಸಮಸ್ಯೆಗಳು ಬೇಕಾದಷ್ಟಿರುವಾಗ ಮತ್ತೊಬ್ಬರ ಬಗ್ಗೆ ತಲೆಕೆಡಿಸಿಕೊಳ್ಳುವುದರಲ್ಲಿ ಸಮಯ ವ್ಯರ್ಥವಾಗಲಿದೆ, ಯುವಜನರು ಗುರು-ಹಿರಿಯ ರೊಂದಿಗೆ ಮಾತನಾಡುವಾಗ ಸೌಜನ್ಯದಿಂದಿರುವುದು ಮೇಲು, ಸೋದರನಿಗೆ ಆಸ್ತಿಕೊಳ್ಳಲು ನೆರವಾಗುವಿರಿ, ಕೊಟ್ಟ ಸಾಲವನ್ನು ಮರಳಿ ಕೇಳದೇ ಹೋದಲ್ಲಿ ನೀವೇ ಸಾಲಗಾರರಾಗುವ ಸನ್ನಿವೇಶ ಬಂದಿತು. ಶಸ್ತ್ರಚಿಕಿತ್ಸಾ ವೈದ್ಯರಿಗೆ ಆದಾಯ ಹೆಚ್ಚಲಿದೆ, ಆದಾಯ ತೆರಿಗೆ ಇಲಾಖೆಯಲ್ಲಿರುವವರಿಗೆ ಮೇಲಾಧಿಕಾರಿಗಳಿಂದ ಹೆಚ್ಚಿನ ಗುರಿ ಮುಟ್ಟುವಂತೆ ಮೇಲಿಂದ ಮೇಲೆ ಒತ್ತಡ ಬರಲಿದೆ ಸಾಕು ಪ್ರಾಣಿಗಳಿಂದ ಅಪಾಯವಾಗಬಹುದು. ಸೋಮ, ಬುಧ, ಗುರು, ಶುಭ ದಿನಗಳು.

**ಈ ವಾರದ ವಿಶೇಷ ದಿನಗಳು :** ದಿನಾಂಕ: 15.12.2024 ನೇ ಭಾನುವಾರ ಹೊಸ್ತಿಲ ಹುಣ್ಣಿಮೆ, ದಿನಾಂಕ: 18.12.2024ನೇ ಬುಧವಾರ ಸಂಕಷ್ಟ ಚತುರ್ಥೀ ಚಂದ್ರೋದಯ ರಾತ್ರಿ 9-00 ಗೆ.

# ರಂಭಾಪುರಿಯ ರುದ್ರಮುನಿ ಜಗದ್ಗುರುಗಳ ಜನ್ಮ ಶತಮಾನೋತ್ಸವ



ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳೊಂದಿಗೆ ಶ್ರೀ ರುದ್ರಮುನಿ ಜಗದ್ಗುರುಗಳು

**ವೀರಶೈವ ಪಂಚ ಪೀಠಗಳಲ್ಲಿ ಒಂದಾದ ವೀರಶೈವ ಮಹಾಮತ ಸಂಸ್ಥಾಪನಾಚಾರ್ಯ ಶ್ರೀ ಜಗದ್ಗುರು ರೇಣುಕಾಚಾರ್ಯರಿಂದ ಸ್ಥಾಪನೆಗೊಂಡ ಶ್ರೀ ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾಸಂಸ್ಥಾನ ಪೀಠದ 120ನೇ ಜಗದ್ಗುರುಗಳಾಗಿ ವಿರಾಜಮಾನರಾದವರು ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರ ರುದ್ರಮುನಿದೇವ ಶಿವಾಚಾರ್ಯ ಭಗವತ್ಪಾದರು.**

ಅಕ್ಟೋಬರ್ 24, 1924ರಂದು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆ ವೈರಾಗ ಗ್ರಾಮದ ವೇ॥ ಬಾಳಲಿಂಗಯ್ಯ ಹಾಗೂ ಲಕ್ಷ್ಮಿ ಬಾಯಿಯವರ ಸುಪುತ್ರರಾಗಿ ಸಂಜನಿಸಿದ ಇವರ ಮೂಲ ನಾಮ ಪಂಚಾಕ್ಷರಸ್ವಾಮಿ. ವೈರಾಗ ಹಿರೇಮಠಕ್ಕೆ 12 ವರುಷದವರಾದ ಶ್ರೀ ಪಂಚಾಕ್ಷರ ಸ್ವಾಮಿಯವರಿಗೆ ಪಟ್ಟಾಧಿಕಾರ ನಡೆಯುತ್ತದೆ. ಮಾಧ್ಯಮಿಕ ಶಿಕ್ಷಣ ಸೊಲ್ಲಾಪುರದಲ್ಲಿ ನಡೆಯುತ್ತದೆ. ಹೆಚ್ಚಿನ ವ್ಯಾಸಂಗಕ್ಕಾಗಿ ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದ 'ಗುರುಕುಲ' ದಲ್ಲಿ ಹಿರೇಮಠದ ಶ್ರೀಗಳು ನೆಲೆಸಿ ಸಾಹಿತ್ಯಾಧ್ಯಯನ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಉಚ್ಚ ಶಿಕ್ಷಣ ಪಡೆದರು. ಶ್ರೀ ಪಂಚಾಕ್ಷರ ಶಿವಾಚಾರ್ಯರು 15 ವರ್ಷಗಳ ವರೆಗೆ ಶ್ರೀಕ್ಷೇತ್ರ ಕಾಶಿಯಲ್ಲಿ ನೆಲೆಸಿ ಅಧ್ಯಯನಗೈದರು. ಈ ಅವಧಿಯಲ್ಲಿ ವಿದ್ಯೆ ಸಂಪಾದನೆಗಾಗಿ ತಮ್ಮ ಆರೋಗ್ಯವನ್ನು ಲೆಕ್ಕಿಸದೇ ಶ್ರಮಿಸಿದರು. ಬಂಗಾಲ ಅಸೋಸಿಯೇಷನ್ ಸಂಘ ನಡೆಸುವ 'ಕಾವ್ಯತೀರ್ಥ ಪದವಿ ಪರೀಕ್ಷೆಯನ್ನು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಗೌರ್ನಮೆಂಟ ಕ್ವೀನ್ಸ್ ಇಂಟರ್ ಕಾಲೇಜಿನಿಂದ 'ವೇದಾಂತಾಚಾರ್ಯ' ಪದವಿ ಗಳಿಸಿಕೊಂಡರು. ಕಾಶಿ ಹಿಂದೂ ವಿಶ್ವವಿದ್ಯಾಲಯದಿಂದ 'ಮೀಮಾಂಸಾಚಾರ' ಹಾಗೂ ಹಿಂದಿ ಎಂ.ಎ. ಪದವಿಗಳನ್ನು ಪ್ರಥಮ ಶ್ರೇಣಿಯಲ್ಲಿ ಸಂಪಾದಿಸಿದರು.

ಈ ಸಂದರ್ಭದಲ್ಲಿ ಶ್ರೀ ಮದ್ವಾರಾಣಾಶಿ ಜ್ಞಾನಸಿಂಹಾಸ ನಾಧೀಶ್ವರ ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದರು ಪೀಠದಲ್ಲಿ ಸಭೆಯನ್ನು ಏರ್ಪಡಿಸಿ ಪಂಚಾಕ್ಷರ ಶಿವಾಚಾರ್ಯರಿಗೆ 'ವಿದ್ಯಾವಾಚಸ್ಪತಿ' ಎಂಬ ಪದವಿಯನ್ನು ದಯಪಾಲಿಸಿದರು. ವಿದ್ಯಾಭ್ಯಾಸ ಮುಗಿಸಿದ ನಂತರ ಶ್ರೀ ಪಂಚಾಕ್ಷರ ಶಿವಾಚಾರ್ಯರು ವೈರಾಗಕ್ಕೆ ದಯಮಾಡಿಸಿ ಹಿರೇಮಠವನ್ನು ಊರ್ಜಿತಗೊಳಿಸಿದರು. ಶಿಷ್ಯ ಸದ್ಭಕ್ತರಿಗೆ ಧರ್ಮ ಜ್ಞಾನವನ್ನು ಬೋಧಿಸಿದರು. ಸನ್ಮಾರ್ಗದ ಸದುಪದೇಶಗೈದು ಸಜ್ಜನರನ್ನಾಗಿ ಮಾಡಿದರು.

ಶ್ರೀಮದ್ ರಂಭಾಪುರಿ ಶಿವಾನಂದ ಜಗದ್ಗುರುಗಳವರ ನಂತರ ವೀರ ಪೀಠವನ್ನು ಆರೋಹಣ ಮಾಡಿದ ಪರಮ ಪೂಜ್ಯ ಶ್ರೀಮದ್ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ವೈರಾಗ ಪಂಚಾಕ್ಷರ ಶಿವಾಚಾರ್ಯರನ್ನು ತಮ್ಮ ಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಮಾಡಬೇಕೆಂದು ಮನದಲ್ಲಿ ನಿಶ್ಚಯಿಸಿದ್ದರು. ಶ್ರೀ ಉಜ್ಜಯಿನಿ, ಶ್ರೀಶೈಲ ಮತ್ತು ಶ್ರೀಕಾಶಿ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಪೀಠದಲ್ಲಿ ದಿನಾಂಕ 15-05-1972 ರಂದು ಶುಭ ಮುಹೂರ್ತದಲ್ಲಿ ವೈರಾಗ ಹಿರೇಮಠದ ಶ್ರೀ ಪಂಚಾಕ್ಷರ ಶಿವಾಚಾರ್ಯರಿಗೆ ಶ್ರೀ ಜಗದ್ಗುರು ರಂಭಾಪುರಿ ಪೀಠದ ಸಂಪ್ರದಾಯದ ಪ್ರಕಾರ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರ ರುದ್ರಮುನಿದೇವ ಶಿವಾಚಾರ್ಯ ಭಗವತ್ಪಾದರೆಂಬ ನೂತನ ನಾಮವನ್ನಿಟ್ಟು, ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದ ಪೀಠಾಧಿಕಾರವನ್ನು ಅನುಗ್ರಹಿಸಿ ಹರಸಿದರು. ಶ್ರೀ ವೀರ ರುದ್ರಮುನಿ ಜಗದ್ಗುರುಗಳು ಧರ್ಮದ ಪ್ರಸಾರಕ್ಕಾಗಿ ನಾಡಿನ ತುಂಬೆಲ್ಲ ಸಂಚರಿಸಿ ಧರ್ಮೋಪದೇಶವನ್ನು ಮಾಡಿದರು.

ಪೂಜ್ಯರ ಮೂಲ ಸ್ಥಳ ಮಹಾರಾಷ್ಟ್ರದ ವೈರಾಗ್ ಆಗಿದ್ದರೂ ಕನ್ನಡ ಭಾಷೆಯನ್ನು ರೂಢಿಸಿಕೊಂಡವರಾಗಿದ್ದರು. ಚತುರ್ಭಾಷೆಗಳನ್ನು ಬಲ್ಲಿದರಾಗಿದ್ದ ಅವರ ಆಶೀರ್ವಚನಗಳು ಸ್ಪಷ್ಟ ಕನ್ನಡದಲ್ಲಿಯೇ ಇರುತ್ತಿದ್ದವು. ಶ್ರೀ ಪೀಠದ ಅಧಿಕಾರದ ಚುಕ್ಕಾಣಿ ಹಿಡಿದ ನಂತರ ರಚನಾತ್ಮಕ ಮತ್ತು ಗುಣಾತ್ಮಕ ಕಾರ್ಯಗಳ ಮೂಲಕ ಶ್ರೀ ಜಗದ್ಗುರು ರಂಭಾಪುರಿ ಪೀಠದ ಬೆಳವಣಿಗೆ ಅಭಿವೃದ್ಧಿಗೆ ಸದಾ ಶ್ರಮಿಸಿದರು. ಭಕ್ತರ ಶ್ರೇಯೋಭಿವೃದ್ಧಿಗಾಗಿ ನಾಡಿನೆಲ್ಲೆಡೆ ಸಂಚರಿಸಿದರು. ಶ್ರೀ ಜಗದ್ಗುರು ರಂಭಾಪುರಿ ಮಹಾಪೀಠದಲ್ಲಿ ಶ್ರೀ ಜಗದ್ಗುರು ರೇಣುಕ ಮಹಾದ್ವಾರ ನಿರ್ಮಾಣ, ಪ್ರವಾಸಿಗಳಿಗೆ ವಸತಿ ಕಟ್ಟಡಗಳ ನಿರ್ಮಾಣ, ಬಾಳೆಹೊನ್ನೂರಿನಲ್ಲಿ ಆರ್ಚ ನಿರ್ಮಾಣ, ತೇರುಮನೆ, ಅತಿಥಿ ಗೃಹಗಳನ್ನು ನಿರ್ಮಿಸಿ ಬರುವ ಯಾತ್ರಿಕರಿಗೆ ಅನುಕೂಲವನ್ನುಂಟು ಮಾಡಿದರು.

ಬಾಳೆಹೊನ್ನೂರಿನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಪೌಢ ಶಾಲೆ ಇದ್ದುದನ್ನು ಶ್ರೀ ಜಗದ್ಗುರು ರೇಣುಕಾಚಾರ್ಯ ಜ್ಯೂನಿಯರ್ ಕಾಲೇಜು ಆಗಿ ಪರಿವರ್ತಿಸಿದರು. ಕಡೂರು ತಾಲ್ಲೂಕಿನ ಉದ್ದೇಬೋರೇನಹಳ್ಳಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಪೌಢಶಾಲೆ, ಶ್ರೀ ಮಹಾಪೀಠದಲ್ಲಿ ವೈದಿಕ ಪಾಠಶಾಲೆ, ಬೀರೂರಿನಲ್ಲಿರುವ ಶ್ರೀ ಮಹಾಪೀಠದ ನಿವೇಶನವನ್ನು ಕಲ್ಯಾಣ ಮಂಟಪ ನಿರ್ಮಾಣಕ್ಕಾಗಿ ಆಶೀರ್ವದಿಸಿದರು. ಇಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಕೃಪಾಪೋಷಿತ ಪತ್ರೆ ಸಿ.ಚನ್ನವೀರಪ್ಪಯ್ಯ ಕಲ್ಯಾಣ ಮಂಟಪ ತಲೆ ಎತ್ತಿ ನಿಂತಿದೆ. ಕಲ್ಯಾಣ ಮಂಟಪದ ಪರಿಸರದಲ್ಲಿಯೇ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಂದಿರ ನಿರ್ಮಾಣ ಮಾಡಿದರು. ಅದರ ಎದುರಾಗಿ ಶ್ರೀ ಜಗದ್ಗುರು ಶಿವಾನಂದ ಆಶ್ರಮ ಇರುವುದನ್ನು ನಾವಿಲ್ಲಿ ಸ್ಮರಿಸಬಹುದು. ಚಿಕ್ಕಮಗಳೂರಿನಲ್ಲಿರುವ ಶ್ರೀ ಪೀಠದ ಸ್ವಂತ ಜಾಗದಲ್ಲಿ ಶ್ರೀ ರಂಭಾಪುರಿ ಮಠ ಬಿಲ್ಡಿಂಗ್ಸ್ ಎಂಬ ಹೆಸರಿನಲ್ಲಿ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಿ ಶ್ರೀ ಪೀಠಕ್ಕೆ ಮಾಸಿಕ ವರಮಾನ ಬರುವಂತೆ ಮಾಡಿದರು.

ಅಲ್ಲದೇ ಅದೇ ಜಿಲ್ಲಾ ಸ್ಥಳದಲ್ಲಿರುವ ಅಮೂಲ್ಯವಾದ ಮತ್ತೊಂದು ನಿವೇಶನವನ್ನು ಸಮಾಜದ ಹಿತ ದೃಷ್ಟಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಕಲ್ಯಾಣ ಮಂಟಪ ನಿರ್ಮಾಣ ಮಾಡಲು ಚಾಲನೆಯಿತ್ತರು. ನಾಡಿಗರ ಉದ್ಧಾರಕ್ಕಾಗಿ ಶ್ರೀ ಜಗದ್ಗುರುಗಳು ಸತತವಾಗಿ ಪರಿಶ್ರಮಿಸಿದರು. ಮೊದಲಿಗಿಂತಲೂ ಶ್ರೀ ಪೀಠದ ಆದಾಯವನ್ನು ದ್ವಿಗುಣಗೊಳಿಸಿದರು. ಗ್ರಾಮಾಂತರ ಬಡ ವಿದ್ಯಾರ್ಥಿಗಳಿಗೆ ಪದವೀ ಶಿಕ್ಷಣಕ್ಕಿಂತ ತಾಂತ್ರಿಕ ಶಿಕ್ಷಣ ಮುಖ್ಯವೆಂದರಿತ ಶ್ರೀ ಜಗದ್ಗುರುಗಳವರು 1983ರಲ್ಲಿ ಬಾಳೆಹೊನ್ನೂರಿನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಕೈಗಾರಿಕಾ ತರಬೇತಿ ವಿದ್ಯಾಲಯವನ್ನು ಪ್ರಾರಂಭಿಸಿದರು. ಶ್ರೀ ಪೀಠದ ಕಾಫೀ ಎಸ್ಟೇಟ ನ್ನು ಅಭಿವೃದ್ಧಿಗೊಳಿಸಿದರು.

ಹಳ್ಯಾಳ ಪಂಚಗೃಹ ಹಿರೇಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ಕಂಡರೆ ಶ್ರೀ ಜಗದ್ಗುರುಗಳಿಗೆ ಎಲ್ಲಿಲ್ಲದ ಅಕ್ಕರೆ. ಅವರ ವಾಕ್ ಪಾಂಡಿತ್ಯ, ನಡೆ-ನುಡಿಗಳು ಜನರೊಡನೆ ಬೆರೆಯುವ ಮನೋಭಾವ ಇವೆಲ್ಲವುಗಳನ್ನು ಶ್ರೀ ಜಗದ್ಗುರುಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅಂತೆಯೇ ಅವರನ್ನು ಶಿವಗಂಗಾ ಮೇಲಣಗವಿ ಮಠಕ್ಕೆ ನೇಮಿಸಿ ಆದೇಶಿಸಿದರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರ ಸರಳತೆ, ಸೌಜನ್ಯತೆ, ಕ್ರಿಯಾಶೀಲತೆ ಕಂಡು ಶ್ರೀ ಜಗದ್ಗುರು ರಂಭಾಪುರಿ ಮಹಾಪೀಠಕ್ಕೆ ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ ಉಯಿಲು ಬರೆದು ನೋಂದಾಯಿಸಿದರು. ಆರೋಗ್ಯ ಸಮಸ್ಯೆಯಿಂದಾಗಿ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಜಗದ್ಗುರುಗಳು ತಮ್ಮ 67ನೇ ವಯಸ್ಸಿನಲ್ಲಿ ಶ್ರೀ ಜಗದ್ಗುರು ರೇಣುಕರಲ್ಲಿ ಲೀನವಾದರು. ಕಾನೂನು ಬದ್ಧ ಉಯಿಲಿನ ಪ್ರಕಾರ ನೇಮಕಗೊಂಡ ಸಿದ್ಧಲಿಂಗ ಶ್ರೀಗಳಿಗೆ 'ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು' ಎಂಬ ನೂತನ ಅಭಿದಾನ ಪ್ರಾಪ್ತವಾಯಿತು. ಲಿಂಗೈಕ್ಯ ಶ್ರೀ ರಂಭಾಪುರಿ ರುದ್ರಮುನಿ ಜಗದ್ಗುರುಗಳ ಆಶಯಕ್ಕೆ ಚಿನ್ನದ ಮುಕುಟವಿಟ್ಟಂತೆ ಶ್ರೀ ರಂಭಾಪುರಿ ವೀರಸೋಮೇಶ್ವರ ಜಗದ್ಗುರುಗಳು ಕಾರ್ಯ ನಿರ್ವಹಿಸಿ 33 ವರ್ಷಗಳಲ್ಲಿ ನೂರು ವರ್ಷದ ಸಾಧನೆ ಮಾಡಿ ತೋರಿಸಿದ್ದಾರೆ.

2024, ಡಿಸೆಂಬರ್ 15ರಂದು ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಲಿಂ. ಶ್ರೀಮದ್ ರಂಭಾಪುರಿ ವೀರ ರುದ್ರಮುನಿದೇವ ಜಗದ್ಗುರುಗಳವರ ಜನ್ಮ ಶತಮಾನೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ಸಮಾರಂಭದ ಸವಿ ನೆನಪಿಗಾಗಿ ಶ್ರೀ ಜಗದ್ಗುರುಗಳವರನ್ನು ಕುರಿತಾಗಿ ಬರೆದ 'ಧರ್ಮ ಚೇತನ' ಕೃತಿ ಬಿಡುಗಡೆಯಾಗಲಿದೆ. ಹಾಗೆಯೇ ರಂಭಾಪುರಿ ಬೆಳಗು ವಿಶೇಷ ಸಂಚಿಕೆ ಮತ್ತು ಶ್ರೀ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್.ಬಾಳನ ಗೌಡರ ಜನ್ಮ ಅಮೃತ ಮಹೋತ್ಸವದ ನೆನಪಿಗಾಗಿ 'ಬಾಳ ಹೊಂಗಿರಣ' ಕೃತಿಗಳು ಬಿಡುಗಡೆಯಾಗಲಿದೆ.

**- ಸಿ.ಎಚ್.ಬಾಳನಗೌಡ್ರ,**
ಬಾಳೆಹೊನ್ನೂರು.

## ಎಸ್.ಎಸ್ ಆಸ್ಪತ್ರೆಯಲ್ಲಿ 'ಅಸ್ತಮಾ ಜಾಗೃತಿ' ಕಾರ್ಯಕ್ರಮ




ದಾವಣಗೆರೆ, ಡಿ. 14- ನಗರದ ಎಸ್.ಎಸ್ ಆಸ್ಪತ್ರೆಯಲ್ಲಿ , ಎಸ್.ಎಸ್ ಕೇರ್ ಟ್ರಸ್ಟ್ ಸಹಯೋಗದಲ್ಲಿ ಅಸ್ತಮಾ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪ ಪ್ರಾಂಶುಪಾಲ ರಾದ ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ, ಶ್ವಾಸಕೋಶ ವಿಭಾಗದ ಮುಖ್ಯಸ್ಥ ಡಾ. ಅನೂಪ್ ಬಾಣೂರ್, ಡಾ. ಅಜಿತ್ ಈಟಿ ಉಪಸ್ಥಿತರಿದ್ದರು.

ಶ್ವಾಸಕೋಶದ ಆರೋಗ್ಯದ ಮಹತ್ವದ ಬಗ್ಗೆ ಮಾತನಾಡಿದ ಡಾ. ಶಶಿಕಲಾ ಪಿ. ಅಲರ್ಜಿ ಹಾಗೂ ಅಸ್ತಮಾ ತೊಂದರೆಯನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಜನರಿಗೆ ವಿವರಿಸಿದ್ದರು. ಈ ಯುಗದಲ್ಲಿ ಅಸ್ತಮಾಗೆ ಆಧುನಿಕ ಚಿಕಿತ್ಸೆ ಲಭ್ಯವಿದ್ದು, ನುರಿತ ತಜ್ಞರಿಂದ ಚಿಕಿತ್ಸೆ ಪಡೆಯುವುದು ಅತ್ಯವಶ್ಯಕ ಎಂದು ನುಡಿದರು.

ಡಾ. ಅಜಿತ್ ಈಟಿ ಮಾತನಾಡಿ, ಅಲರ್ಜಿ ಹಾಗೂ ಅಸ್ತಮಾ ತೊಂದರೆಯ ಕಾರಣಗಳು ಹಾಗೂ ಅದರ ಗುಣಲಕ್ಷಣಗಳ ಬಗ್ಗೆ ವಿವರಿಸಿದರು. ಅಸ್ತಮಾ ತೊಂದರೆಗೆ ಇನ್ಹೇಲರ್ ಮೂಲಕ ನೀಡುವ ಸ್ಟಿರಾಯ್ಡ್ ಅತ್ಯಂತ ಪರಿಣಾಮಕಾರಿ ಹಾಗೂ ಸುರಕ್ಷಿತ ಎಂದರು.

ಶ್ವಾಸಕೋಶ ವಿಭಾಗದ ಕಿರಿಯ ವೈದ್ಯರು ಒಂದು ಕಿರು ನಾಟಕ ಪ್ರದರ್ಶಿಸಿ ಜನರಲ್ಲಿ ಅಸ್ತಮಾ ಹಾಗೂ ಇನ್ಹೇಲರ್ ಬಳಕೆ ಮತ್ತು ಧೂಮಪಾನದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ಶ್ವಾಸಕೋಶ ವಿಭಾಗದ ಡಾ. ಕುಶಾಲ್ ಬೋಂದಡೆ, ಡಾ. ಸಿದ್ಧಾರ್ಥ್ ಅಂಗಡಿ , ಡಾ.ರುಚಿಕ್ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಇಂದು ಕಾರ್ತಿಕ

ಮಲೇಬೆನ್ನೂರು ಪಟ್ಟಣದ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಮತ್ತು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ ಕಾರ್ತಿಕೋತ್ಸವ ಜರುಗಲಿದೆ ಎಂದು ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

## ಜ.15 ರಂದು ಕೊಪ್ಪಳ ಗವಿಸಿದ್ದೇಶ್ವರ ಮಠದ ಜಾತ್ರೆ

ಕೊಪ್ಪಳ, ಡಿ.14- ಇಲ್ಲಿನ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವಕ್ಕೆ ಸಿದ್ಧತಾ ಕಾರ್ಯಕ್ರಮಗಳು ಆರಂಭವಾಗಿದ್ದು, ಜನವರಿ 15ರಂದು ಸಂಜೆ 5 ಗಂಟೆಗೆ ಮಹಾರಥೋತ್ಸವ ಜರುಗಲಿದೆ.

ಜ. 11ರಂದು ಸಂಜೆ 5 ಗಂಟೆಗೆ ಬಸವಾಪಟ, 12ರಂದು ಸಂಜೆ 5 ಗಂಟೆಗೆ ಗವಿಮಠದ ಆವರಣದಲ್ಲಿ ರುವ ಕೆರೆಯಲ್ಲಿ ತೆಪ್ಪೋತ್ಸವ ಹಾಗೂ ಸಂಗೀತ ಕಾರ್ಯಕ್ರಮ, 13ರಂದು ಸಂಜೆ 5ಕ್ಕೆ ಗವಿಸಿದ್ದೇಶ್ವರ ಮೂರ್ತಿಯ (ಪಲ್ಲಕ್ಕಿ) ಕಳಸ ಮೆರವಣಿಗೆ ನಡೆಯಲಿವೆ. 14ರಂದು ಸಂಜೆ 5 ಗಂಟೆಗೆ ಕೈಲಾಸ ಮಂಟತಪದಲ್ಲಿನ ಅನ್ನಪೂರ್ಣೇಶ್ವರಿ ದೇವಿಗೆ ಉಡಿ ತುಂಬುವುದು, ಬಳಿಕ ಲಘು ರಥೋತ್ಸವ ಆಯೋಜನೆಯಾಗಿದೆ. 15ರಂದು ಮಹಾರಥೋತ್ಸವದ ಬಳಿಕ ಸಂಜೆ 6 ಗಂಟೆಗೆ ಕೈಲಾಸ ಮಂಟಪದಲ್ಲಿ ಧಾರ್ಮಿಕ ಗೋಷ್ಠಿ, ಅನುಭಾವಿಗಳ ಅಮೃತ ಚಿಂತನ ಗೋಷ್ಠಿಗಳು ಮೂರು ದಿನಗಳ ಕಾಲ ಜರುಗಲಿವೆ.

16ರಂದು ಸಂಜೆ 5ಕ್ಕೆ ಮಠದ ಆವರಣದಲ್ಲಿ ಬಳಗಾನೂರ ಶಿವಶಾಂತ ವೀರ ಶರಣರರಿಂದ ದೀರ್ಘದಿಂಡ ನಮಸ್ಕಾರ ಮತ್ತು ಮದ್ದು ಸುಡಲಾಗುತ್ತದೆ. 17ರಂದು ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಗವಿಮಠದ ಪ್ರಕಟಣೆ ತಿಳಿಸಿದೆ.

## ಎರೆಬೂದಿಹಾಳ್ : ಜಂತುಹುಳ ನಿವಾರಣಾ ದಿನ




ಮಲೇಬೆನ್ನೂರು ಡಿ. 14 - ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಎರೆಬೂದಿಹಾಳ ಗ್ರಾಮದ ಪಿ ಅಂಡ್ ಬಿ ಬಸವನಗೌಡ್ರ ಪೌಢ ಶಾಲೆಯಲ್ಲಿ ಜಂತುಹುಳ ನಿವಾರಣಾ ದಿನದ ಅಂಗವಾಗಿ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಟಿಹೆಚ್ಓ ಡಾ. ಅಬ್ದುಲ್ ಖಾದರ್ ಅವರು ವಿದ್ಯಾರ್ಥಿಗಳಿಗೆ ಜಂತುಹುಳು ಮಾತ್ರೆಗಳನ್ನು ನೀಡಿ, ಜಂತುಹುಳು ನಿವಾರಣಾ ದಿನದ ಮಹತ್ವದ ಬಗ್ಗೆ ಅರಿವು ಮೂಡಿಸಿದರು. ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಜಂತುಹುಳು ನಿಂದ ಆಗುವಂತಹ ಆರೋಗ್ಯ ಸಮಸ್ಯೆಗಳ ಬಗ್ಗೆ ಮಕ್ಕಳಿಗೆ ಸವಿವರವಾಗಿ ತಿಳಿಸಿದರು. ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಆದರ್ಶ ಕ್ಷಯ ರೋಗ ಪತ್ತೆ ಹಾಗೂ ಚಿಕಿತ್ಸೆ ಕ್ಷಯರೋಗ 100 ದಿನಗಳ ಅಭಿಯಾನ ಕಾರ್ಯಕ್ರಮದ ಬಗ್ಗೆ ಮಕ್ಕಳಿಗೆ ಹಾಗೂ ಶಾಲಾ ಶಿಕ್ಷಕರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದದವರು, ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗದವರಾದ ಮಹಮ್ಮದ್ ಇಮ್ರಾನ್, ಲಕ್ಷ್ಮಿ ದೇವಿ, ಆಶಾ ಕಾರ್ಯಕರ್ತೆ ಪುಷ್ಪ ಹಾಜರಿದ್ದರು. ಶಾಲೆಯ ಶಿಕ್ಷಕ ಪದ್ದಪ್ಪ ನಿರೂಪಿಸಿ, ವಂದಿಸಿದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಕಾರ್ತಿಕ

ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಕಾರ್ತಿಕ ದೀಪೋತ್ಸವ ಕಾರ್ಯಕ್ರಮವು ಜರುಗಲಿದೆ.



ಇಂದು ಟಿ. ಜಯದೇವಪ್ಪ ಕುಟುಂಬದವರಿಂದ ಕಾರ್ತಿಕ ದೀಪೋತ್ಸವ ಜರುಗಲಿದೆ.

ನಾಳೆ ಸೋಮವಾರ ಬಾವಿಕಟ್ಟೆ ಚಿದಾನಂದಪ್ಪ ಅವರು ಕಾರ್ತಿಕ ದೀಪೋತ್ಸವ ನಡೆಸಿಕೊಡಲಿದ್ದು, ಪ್ರತಿದಿನ ಸಂಜೆ 5.30 ರಿಂದ ನಡೆಯುವ ಈ ದೀಪೋತ್ಸವ ಕಾರ್ಯಕ್ರಮದಲ್ಲಿ ಸರ್ವ ಭಕ್ತರು ಭಾಗವಹಿಸಿ ಶ್ರೀ ಗುರು ಕೊಟ್ಟೂರೇಶ್ವರರ ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

# ಎಲ್ಲರಿಗೂ ನ್ಯಾಯ ಸಿಗಬೇಕೆನ್ನುವುದೇ ಸಂವಿಧಾನದ ಆಶಯ

## ಹರಿಹರದಲ್ಲಿ 'ಚಲೋ ಬೆಳಗಾವಿ ಅಂಬೇಡ್ಕರ್- ಎಸ್‌ಡಿಪಿಐ ಜಾಥಾ ಕಾರ್ಯಕ್ರಮದಲ್ಲಿ ಭಾಸ್ಕರ ಪ್ರಸಾದ್

ಹರಿಹರ, ಡಿ.14- ಸಾಮಾಜಿಕ ನ್ಯಾಯದ ನೆಲೆಗಟ್ಟಿನಲ್ಲಿ, ನಾಡಿನ ಸಮಸ್ತ ಪ್ರಜೆಗಳಿಗೂ ಸಮಾನ ಅವಕಾಶ, ಹಕ್ಕು, ಅಧಿಕಾರ ಮತ್ತು ಆಸ್ತಿ ಹಂಚಿಕೆಯಾಗಬೇಕು ಎನ್ನುವುದು ಸಂವಿಧಾನದ ಆಶಯವಾಗಿರುತ್ತದೆ ಎಂದು 'ಚಲೋ ಬೆಳಗಾವಿ ಅಂಬೇಡ್ಕರ್ ಜಾಥಾ' ರಾಜ್ಯ ಸಂಚಾಲಕ ಬಿ.ಆರ್. ಭಾಸ್ಕರ್ ಪ್ರಸಾದ್ ಹೇಳಿದರು.

ಯೂ ಟರ್ನ್ ರಾಜ್ಯ ಸರ್ಕಾರದ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ 'ಚಲೋ ಬೆಳಗಾವಿ ಅಂಬೇಡ್ಕರ್ ಜಾಥಾ-2' ಮತ್ತು ಉಡುಪಿಯಿಂದ ಆರಂಭಗೊಂಡಿರುವ ಎಸ್.ಡಿ.ಪಿ.ಐ ಜಾಥಾ ನಿನ್ನೆ ನಗರಕ್ಕೆ ಆಗಮಿಸಿದ್ದ ವೇಳೆ ತಹಶೀಲ್ದಾರ್ ಕಚೇರಿಯ ಮುಂಭಾಗದಲ್ಲಿ ಅವರು ಮಾತನಾಡಿದರು.

ಎಲ್ಲರಿಗೂ ಸಮಾನ ಹಕ್ಕು, ಅವಕಾಶ ಸಿಗಬೇಕೆನ್ನುವ ಉದ್ದೇಶವನ್ನು ಹೊಂದಿದ್ದೇವೆ ಎಂದು ಹೇಳುವ ಎಲ್ಲಾ ಪಕ್ಷಗಳ ಸರ್ಕಾರಗಳು ಇಲ್ಲಿಯವರೆಗೂ ಶೋಷಿತ ಮತ್ತು ಅವಕಾಶ ವಂಚಿತ ಜನ ಸಮುದಾಯಗಳಿಗೆ ದ್ರೋಹ ವೆಸ ಗುತ್ತಲೇ ಬಂದಿವೆ. 2013ರ ಅವಧಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಾಂತರಾಜ್ ಆಯೋಗ ವನ್ನು ರಚಿಸಿತು. ಆ ಆಯೋಗ ಸುಮಾರು 167 ಕೋಟಿ ರೂ. ಹಣ ಖರ್ಚು ಮಾಡಿ ವರದಿಯನ್ನು ಸಿದ್ದಪಡಿಸಿತು. ಆದರೆ ಅದನ್ನು ಸಿದ್ದರಾಮಯ್ಯ ಸರ್ಕಾರ ಸ್ವೀಕರಿಸಲೂ ಸಿದ್ದವಿರಲಿಲ್ಲ, 2023ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಾಗ ಅದನ್ನು ಸ್ವೀಕರಿಸಿತಾದರೂ ಆ ವರದಿಯ ಅಂಶಗಳನ್ನು ಸಾರ್ವಜನಿಕಗೊಳಿಸಲು ಮುಂದಾಗಿಲ್ಲ. ಆದ್ದರಿಂದ ಕಾಂತರಾಜ್ ವರದಿ ಯನ್ನು ಕೂಡಲೇ ಸಾರ್ವಜನಿಕಗೊಳಿಸಬೇಕು ಎಂದು ಹೇಳಿದರು.




ರಾಜ್ಯದಲ್ಲಿ ಸುಮಾರು ಶೇ. 17 ರಷ್ಟು ಮುಸ್ಲಿಂ ಸಮುದಾಯದ ಜನರಿಗೆ ಇದುವರೆಗೂ 2ಬಿ ವರ್ಗದಡಿ ಜಾರಿಯಲ್ಲಿದ್ದ 4ರಷ್ಟು ಮೀಸಲಾತಿ ಯನ್ನು ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ರದ್ದು ಮಾಡಿತ್ತು, ಅದನ್ನು ಸುಪ್ರೀಂ ಕೋರ್ಟ್ ತಡೆಹಿಡಿದಿದೆ. ಆದರೆ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಮುಂದಾಗುತ್ತಿಲ್ಲ ಎಂದು ಹೇಳಿದರು.

ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದ ಗುಂಪುಗಳು ಜನರಲ್ಲಿ ಸುಳ್ಳು ಹೇಳುತ್ತಾ, ಜನರಲ್ಲಿ ದ್ವೇಷ ಭಾವನೆಗಳು ಮೂಡಿಸುತ್ತಿವೆ. ವಕ್ಫ್ ಅನ್ನುವುದು ಸರ್ಕಾರ ಮುಸ್ಲಿಂ ಸಮುದಾಯಕ್ಕೆ ನೀಡಿದ್ದಲ್ಲ, ಬದಲಿಗೆ ಮುಸ್ಲಿಂ ಸಮುದಾಯದ ಜನರು ದಾನದ ರೂಪದಲ್ಲಿ ನೀಡಿದ ಆಸ್ತಿಗಳು. ಇದನ್ನು ಮರೆ ಮಾಚಿ ಮುಸ್ಲಿಂ ಸಮುದಾಯ ಜನ ಸಾಮಾನ್ಯರ ಭೂಮಿಯನ್ನು ಕಸಿಯುತ್ತಿದೆ ಎಂಬ ಸುಳ್ಳನ್ನು ಕೋಮುವಾದಿಗಳು ಬಿತ್ತುತ್ತಿದ್ದಾರೆ ಎಂದು ಹೇಳಿದರು.

ಹೆಗ್ಗೆರೆ ರಂಗಪ್ಪ ಮಾತನಾಡಿ, ಹಿಂದಿನ ಸರ್ಕಾರ ಮುಸ್ಲಿಂ ಸಮುದಾ ಯದ ಮೀಸಲಾತಿ ಕಡಿಮೆ ಮಾಡಿ ಪಂಚಮಸಾಲಿ ಸಮಾಜಕ್ಕೆ ನೀಡುವುದಕ್ಕೆ ಮುಂದಾಗಿದ್ದು, ದೊಡ್ಡ ಮೋಸದ ಕೆಲಸವನ್ನು ಮಾಡಿದೆ, ಈಗಿನ ಸರ್ಕಾರ ಮುಸ್ಲಿಂ ಸಮುದಾಯದವರಿಗೆ 2ಬಿ ಕೊಡದೇ ಹೋದರೆ ಸರ್ಕಾರ ಕೆಳಗೆ ಇಳಿಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಾವಣಗೆರೆ ಬಸವರಾಜ್ ಮಾತನಾಡಿದರು. ಎಸ್.ಡಿ.ಪಿ.ಐ. ರಾಜ್ಯ ಅಧ್ಯಕ್ಷ ಅಬ್ದುಲ್ ಮಜೀದ್, ಜಿಲ್ಲಾ ಅಧ್ಯಕ್ಷ ಯಯ್ಯಾ, ಹರಿಹರ ತಾಲ್ಲೂಕು ಅಧ್ಯಕ್ಷ ಸಮಿವುಲ್ಲಾ, ಮುಖಂಡ ಫೈಯಾಜ್ ಆಹ್ಮದ್, ಅಂಜಾದ್ ಖಾನ್, ನಗರಸಭೆ ಸದಸ್ಯರಾದ ಆರ್.ಸಿ. ಜಾವೇದ್, ಎಂ.ಎಸ್. ಬಾಬುಲಾಲ್, ಡಿ.ಎಸ್.ಎಸ್. ಸಂಘಟನೆ ಮಂಜುನಾಥ್, ಬಿ.ಎಸ್.ಪಿ ಜಿಲ್ಲಾ ಅಧ್ಯಕ್ಷ ಡಿ. ಹನುಮಂತಪ್ಪ, ಅಂಗಡಿ ಚಂದ್ರು, ಬಾಳೆಕಾಯಿ ಶ್ರೀನಿವಾಸ್, ಅಂಜಿನಪ್ಪ, ಅಂಜುಮಾನ್ ಇಸ್ಲಾಮಿಯಾ ಸಮಿತಿಯ ಸದಸ್ಯರಾದ ಎಂ.ಎನ್.ಡಿ. ಫಾರೂಕ್, ಕೆ.ಎಂ. ಸಾಧಿಕ್ ಉಲ್ಲಾ, ಅಫ್ರೋಜ್ ಇತರರು ಹಾಜರಿದ್ದರು.

ಹರಿಹರ ವೃತ್ತ ನಿರೀಕ್ಷಕ ಎಸ್ ದೇವಾನಂದ್, ಪಿಎಸ್ಐ ಶ್ರೀಪತಿ ಗಿನ್ನಿ, ವಿಜಯಕುಮಾರ್, ಎ.ಎಸ್.ಐ. ರಾಜಶೇಖರಯ್ಯ, ಸಿಬ್ಬಂದಿಗಳಾದ ರವಿಕುಮಾರ್, ರಂಗಪ್ಪ, ದಿಲೀಪ್ ಇತರರು ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

# ದಾಖಲೆ ಸಹಿತ ಭ್ರಷ್ಟಾಚಾರ ಪ್ರಸ್ತಾಪ

(3ನೇ ಪುಟದಿಂದ) ಅನೌಪಚಾರಿಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವತಃ ವಿಷಯ ಪ್ರಸ್ತಾಪಿಸಿ, ಬಿಜೆಪಿಯ ಎಲ್ಲಾ ಹಗರಣಗಳನ್ನು ಬಯಲು ಮಾಡಲು ಸಜ್ಜಾಗಿ ಹೋರಾಟ ನಡೆಸಿ ಎಂದಿದ್ದಾರೆ.

ಸೋಮವಾರದಿಂದಪುನರಾರಂಭಗೊಳ್ಳುವ ಅಧಿವೇಶನದಲ್ಲಿ ಬಿಜೆಪಿ ಸದಸ್ಯರು ಪಂಚಮಸಾಲಿ ಮೀಸಲಾತಿ ಹೋರಾಟ ಸೇರಿದಂತೆ ಕೆಲವು ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರದ ಮೇಲೆ ಎರಗಲು ಸಿದ್ಧಗೊಂಡಿದ್ದಾರೆ. ಪಂಚಮಸಾಲಿ ವಿಷಯವನ್ನು ರಾಜಕೀಯವಾಗಿ ಪರಿವರ್ತಿಸಲು ಹೊರಟಿದ್ದು, ಇದಕ್ಕೆ ಅವಕಾಶ ನೀಡಬಾರದು, ನಾವು ಅವರ ವಿರುದ್ಧ ಒಗ್ಗಟ್ಟಿನಿಂದ ಪ್ರತಿ ದಾಳಿ ನಡೆಸಬೇಕು.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ, ಆ ಪಕ್ಷದ ಮುಖಂಡರು ಮಾಡಿರುವ ಹಗರಣ ಮತ್ತಿತರೆ ವಿಷಯಗಳಲ್ಲಿ ಕಾನೂನಿನಡಿ ಕ್ರಮ ಜರುಗುತ್ತಿಲ್ಲ.

ನ್ಯಾಯಾಲಯದಲ್ಲಿ ನಡೆದಿರುವ ವಿಷಯಗಳ ಕುರಿತು ಸದನದಲ್ಲಿ ಚರ್ಚೆ ಮಾಡಿ ಎಲ್ಲವನ್ನೂ ಬಹಿರಂಗಪಡಿಸೋಣ.

ಅಭಿವೃದ್ಧಿ ಹೊರತುಪಡಿಸಿ ಬೇಡದ ವಿಷಯಗಳನ್ನು ಪ್ರಸ್ತಾಪಿಸಿ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೊರಟಿದ್ದಾರೆ, ಅವರಿಗೆ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಹಾಗೂ ಸರ್ಕಾರದ ಕಾರ್ಯಕ್ರಮಗಳ ಲೋಪದ ಬಗ್ಗೆ ಚರ್ಚೆ ನಡೆಸುವ ಮನಃಸ್ಥಿತಿ ಇಲ್ಲ.

ಉಳಿದಿರುವ ಐದು ದಿನಗಳ ಕಲಾಪವನ್ನು ಪಂಚಮಸಾಲಿ, ಮುಡಾ, ಬಾಣಂತಿಯರ ಸಾವು ಸೇರಿದಂತೆ ಕೆಲವು ವಿಷಯಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡಲು ಹೊರಟಿದ್ದಾರೆ.

ಆಡಳಿತದಲ್ಲಿನ ಆಕಸ್ಮಿಕ ತಪ್ಪುಗಳನ್ನೇ ದೊಡ್ಡದಾಗಿ ಬಿಂಬಿಸಲು ಹೊರಟಿದ್ದಾರೆ, ನಾವೂ ಸಹಾ ಅವರ ಆಡಳಿತದಲ್ಲಿ ನಡೆದಿರುವ 23 ಹಗರಣಗಳನ್ನು ಎಳೆ ಎಳೆಯಾಗಿ ಬಿಡಿಸಿಡೋಣ.

ಪಂಚಮಸಾಲಿ ಹೋರಾಟ ಮಾಡಿದರೆಂದಾಕ್ಷಣ ತಲೆ ಬಾಗಬೇಕಿಲ್ಲ, ಕಾನೂನಾತ್ಮಕವಾಗಿ ಏನು ಸಾಧ್ಯವೋ, ಅದನ್ನು ಮಾಡೋಣ, ಅವರು ಅನ್ಯಾಯ ಮಾಡಿದರೆಂದು ನಾವು ಇನ್ನೊಂದು ಸಮಾಜಕ್ಕೆ ಅನ್ಯಾಯ ಮಾಡುವುದು ಸರಿಯಲ್ಲ.

ವಿಧಾನಸಭೆಯಷ್ಟೇ ಅಲ್ಲದೆ, ಪರಿಷತ್‌ನಲ್ಲೂ ಸಚಿವರುಗಳು ಹಾಜರಿದ್ದು ಅವರ ರಾಜಕೀಯ ಅಸ್ತ್ರಗಳಿಗೆ ನಾವೂ ಪ್ರತ್ಯಾಸ್ತ್ರ ಬಿಡೋಣ ಎಂದಿದ್ದಾರೆ.

# ಮೀಸಲಾತಿ : ಪಂಚಮಸಾಲಿ ಸಮಾಜದ ಹೋರಾಟಗಾರರ ಮೇಲೆ ಹಲ್ಲೆ ಖಂಡನೆ

**ಜಗಳೂರು**

ಜಗಳೂರು, ಡಿ. 14 - ಬೆಳಗಾವಿಯಲ್ಲಿ ಪಂಚಮಸಾಲಿ ಸಮಾಜದವರ ಮೇಲೆ ಪೊಲೀಸರು ಏಕಾ ಏಕಿ ಲಾಠಿ ಚಾರ್ಜ್ ಮಾಡಿರುವುದನ್ನು ಖಂಡಿಸಿ ತಾಲ್ಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ತಾಲ್ಲೂಕು ಅಧ್ಯಕ್ಷ ಹಾಗೂ ತಾ.ಪಂ. ಮಾಜಿ ಅಧ್ಯಕ್ಷ ಯು.ಜಿ. ಶಿವಕುಮಾರ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮೀಸಲು ಹೋರಾಟವನ್ನು ಸರ್ಕಾರ ಪೊಲೀಸ್ ಬಲ ಪ್ರಯೋಗಿಸಿ ಹತ್ತಿಕ್ಕುವ ಕೆಲಸ ಮಾಡಿದೆ ಎಂದು ಆಡಳಿತ ವ್ಯವಸ್ಥೆ ವಿರುದ್ಧ ಆಕ್ರೋಶ ಹೊರ ಹಾಕಿದರು.

ಪ್ರತಿಭಟನೆಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣವನ್ನು ವಾಪಸ್ ಪಡೆಯಬೇಕು. ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಪ್ರಕರಣದ ಬಗ್ಗೆ ನ್ಯಾಯಾ ಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಅಷ್ಟೇ ಅಲ್ಲದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮುದಾಯದ ಮುಖಂಡರನ್ನು ಸಭೆ ನಡೆಸಿ ಮೀಸಲಾತಿ ಬೇಡಿಕೆ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಜೊತೆಗೆ ಸಿಎಂ ಮತ್ತು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡ ಪ.ಪಂ. ಸದಸ್ಯ ರೇವಣಸಿದ್ದಪ್ಪ, ಗಡಿ ಮಾಕುಂಟೆ ನಾಗರಾಜ್, ಮಹಾಸ್ವಾಮಿ, ಹೊಸಕೆರೆ ಮುಕುಂದ, ಚಿಕ್ಕ ಬನ್ನಿಹಟ್ಟಿ ನಾಗರಾಜ್, ಮುಷ್ಟೂರಪ್ಪ, ಗೌಡರ ಮುರಿಗೆಪ್ಪ, ಮಲ್ಲಿಕಾರ್ಜುನ್ ಸೇರಿದಂತೆ ಅನೇಕರು ಇದ್ದರು.

## ಪದವಾಣಿ-118

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.

| | | | | | | | | |
|---|---|---|---|---|---|---|---|---|
| 1 | 2 | | ■ | ■ | ■ | 3 | 4 | |
| ■ | | ■ | ■ | ■ | ■ | ■ | | ■ |
| 5 | | | 6 | ■ | 7 | | | 8 |
| | ■ | ■ | | ■ | | ■ | ■ | |
| | ■ | ■ | | ■ | | ■ | ■ | |
| | ■ | ■ | | ■ | | ■ | ■ | |
| 9 | 10 | | | ■ | 11 | | 12 | |
| ■ | | ■ | ■ | ■ | ■ | ■ | | ■ |
| 13 | | | ■ | ■ | ■ | 14 | | |

**ಎಡದಿಂದ ಬಲಕ್ಕೆ :**

1) ಬಯ್ಯಲು ಸೂಕ್ತವೆನಿಸಿದ ವಿಶಾಲ ಜಾಗ 3
3) ಮಾತೆ ತೋರಿದ ಪ್ರೀತಿ 3
5) ಕೆಂಪು ಗಂಧವನ್ನು ಹೀಗೂ ಕರೆವರು 4
7) ಪ್ರತ್ಯೇಕಿಸು 4
9) ಆಂಧ್ರ ಪ್ರದೇಶದಿಂದ ಪ್ರತ್ಯೇಕವಾದ ರಾಜ್ಯ 4
11) ಸರಸಸಲ್ಲಾಪ 4
13) ಗಾಣದಿಂದ ಎಣ್ಣೆ ತೆಗೆಯುವವ 3
14) ರಾಜನ ಸಭೆ 3

**ಮೇಲಿನಿಂದ ಕೆಳಕ್ಕೆ :**

2) ಒಂದು ಬಗೆಯ ಡೇರೆ ಉಲ್ಟಾ ಆಗಿದೆ 3
4) ಮಡಿ ಮಾಡಲು ಏರಿದ ಉಪ್ಪರಿಗೆ 3
5) ವಂಶವೊಂದು ಪೂಜಿಸುವ ದೇವರು 5
6) ಹಳೆಯದನ್ನು ಹೊಸದು ಮಾಡುವಿಕೆ 5
7) ಬಿರು ಬಿಸಿಲಿನ ಸಮಯ 5
8) ಗರುಡ ಧ್ವಜ 5
10) ಒಂದು ಅಲೆಮಾರಿ ಜನಾಂಗ 3
12) ಮಾತು ಕೇಳಲು ಬಂದ ಸೋದರ ಮಾವ 3

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ – 117 ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ದಂತಮಂಜನ 3) ಅರ್ಬುದ 4) ಮಡಿಕೆ 6) ತರಕಲು 8) ಗರಗಸ 9: ಅತಿಕಾಯ 11) ವರಮಾನ 14) ನನಸು 15) ಯಮಕ 16) ಮಧುರಗಾನ.

ಮೇಲಿನಿಂದ ಕೆಳಕ್ಕೆ : 1) ದಂದಶೂಕ 2) ನಮಸ್ಕಾರ 3) ಅಲೆತ 5) ಕೆಲಸ 7) ಲುಲಾಯ 8) ಗಡವ 9) ಅಜಿನ 10) ಕಾಡುಸುಮ 12) ರಸಾಯನ 13) ನರಕ.

# ಮುಡಾಕ್ಕೆ ಬಿಡಿಎ ಮಾದರಿ ಪ್ರತ್ಯೇಕ ಕಾಯ್ದೆಗೆ ತೀರ್ಮಾನ

(3ನೇ ಪುಟದಿಂದ) ಅನೇಕ ಹೊಸ ಹೊಸ ಬಡಾವಣೆಗಳನ್ನು ನಿರ್ಮಿಸಿ, ನಿವೇಶನಗಳನ್ನು ಹಂಚಿಕೆ ಮಾಡಿದೆ. ಆದರೆ, ಸಾವಿರಾರು ಬಿಡಿ ನಿವೇಶನಗಳನ್ನು ಆಡಳಿತ ಮಂಡಳಿಯೊಂದಿಗೆ ಅಧಿಕಾರಿಗಳು ಶಾಮೀಲಾಗಿ ಬೇಕಾಬಿಟ್ಟಿ ಹಂಚಿ, ಮುಡಾಗೆ ಸಾವಿರಾರು ಕೋಟಿ ರೂ. ನಷ್ಟ ಉಂಟು ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ 14 ನಿವೇಶನಗಳನ್ನು ತಮ್ಮ ಜಮೀನಿನ ಸ್ವಾಧೀನಕ್ಕೆ ಬದಲಾಗಿ ಪಡೆದುಕೊಂಡಿದ್ದೇ ಪ್ರಾಧಿಕಾರದಲ್ಲಿ ನಡೆದಿರುವ ಭ್ರಷ್ಟಾಚಾರಗಳು ಬಯಲಿಗೆ ಬರಲು ಕಾರಣವಾಗಿದ್ದು.

ಈ ಬೆಳವಣಿಗೆ ನಂತರ ರಾಜಭವನ ಮಧ್ಯೆ ಪ್ರವೇಶಿಸಿ ನ್ಯಾಯಾಲಯದ ಆದೇಶದಂತೆ ತನಿಖೆಯೂ ನಡೆದಿದೆ. ಇದರ ನಡುವೆ ಜಾರಿ ನಿರ್ದೇಶನಾಲಯ ಪ್ರತ್ಯೇಕ ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದು ಮುಂದಿನ ದಿನಗಳಲ್ಲಿ ಸರ್ಕಾರದ ಮಟ್ಟದಲ್ಲಿ ದೊಡ್ಡ ಸಂಚಲನ ಆಗಲಿದೆ.

# ಮಲೇಬೆನ್ನೂರು: ಶ್ರೀ ಏಕನಾಥೇಶ್ವರಿ ಅಮ್ಮನವರ ಸಂಭ್ರಮದ ಕಾರ್ತಿಕೋತ್ಸವ



ಮಲೇಬೆನ್ನೂರು, ಡಿ.14- ಇಲ್ಲಿನ ಹರಳಹಳ್ಳಿ ರಸ್ತೆಯಲ್ಲಿರುವ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕಾರ್ತಿಕೋತ್ಸವವು ನಿನ್ನೆ ಸಂಜೆ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

# ಆರ್‌ಸಿಬಿ ತಂಡಕ್ಕೆ ಪ್ರೀಮಿಯರ್ ಲೀಗ್ ಕಪ್



ದಾವಣಗೆರೆ, ಡಿ.14 - ನಗರದ ರಾಯಲ್ ಕ್ರಿಕೆಟರ್ಸ್ ವತಿಯಿಂದ ಮಂಡಕ್ಕಿ ಭಟ್ಟಿ ಲೇಔಟ್ ಮಿಲಾದ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ಎ.ಬಿ ತಂಡದ ವಿರುದ್ಧ ಜಯಗಳಿಸಿದ ಆರ್.ಸಿ.ಬಿ ಕ್ರಿಕೆಟ್ ತಂಡವು ಪ್ರೀಮಿಯರ್ ಲೀಗ್ ಕಪ್ ತನ್ನದಾಗಿಸಿಕೊಂಡಿದೆ.

ದಕ್ಷಿಣ ಕ್ಷೇತ್ರಕ್ಕೆ ಸೀಮಿತವಾಗಿರುವಂತೆ ಐಪಿಎಲ್ ಮಾದರಿಯಲ್ಲಿ ನಡೆಸಿದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಎಂಟು ತಂಡಗಳನ್ನು ಫ್ರಾಂಚೈಸಿ ರೂಪದಲ್ಲಿ ವಿಂಗಡಿಸಲಾಗಿತ್ತು.

ಮಹಾನಗರ ಪಾಲಿಕೆ ಸದಸ್ಯ ಎ.ಬಿ. ರಹೀಮ್ ಸಾಬ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಪತ್ರಕರ್ತ ಬಿ. ಸಿಕಂದರ್ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

ಟೂರ್ನಿಯ ವ್ಯವಸ್ಥಾಪಕ ಅಬ್ದುಲ್ ಘನಿ, ಮುಖಂಡರಾದ ಅಕ್ಬರ್ ಅಲಿ, ಎನ್.ಕೆ. ಹಬೀಬ್, ಹಮೀದ್, ಸೇರಿದಂತೆ ಇನ್ನು ಅನೇಕರು ಉಪಸ್ಥಿತರಿದ್ದರು. ತಾಜುದ್ದೀನ್ ನೀಡಿದ ಕ್ರಿಕೆಟ್ ಲೈವ್ ಕಾಮೆಂಟರಿ ಕ್ರೀಡಾ ಪ್ರೇಮಿಗಳಿಗೆ ಖುಷಿ ನೀಡಿತು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 40x60 ಉತ್ತರ, ಕಮರ್ಷಿಯಲ್ 120 ಅಡಿ ರಸ್ತೆಗೆ.
ಕಿರಣ್ ಬೂಸ್ನೂರ್ (ಏಜೆಂಟ್)
97315-63409

**ಸೈಟು ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ ಎ ಬ್ಲಾಕ್, ದಾವಣಗೆರೆ ಪೂರ್ವ ದಿಕ್ಕಿನ 40X60 ಅಳತೆಯ ಎಂ.ಬಿ.ಎ. ಕಾಲೇಜು ರಸ್ತೆ, ಪೋಸ್ಟ್ ಆಫೀಸ್ ಹತ್ತಿರ.
91138 89042

**ಬೇಕಾಗಿದ್ದಾರೆ**
ಡೆಕೋರೇಷನ್ ಷೋರೂಂನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
ಸೆಲಬ್ರೇಷನ್ಸ್
ಚರ್ಚ್ ರೋಡ್, ದಾವಣಗೆರೆ.
85535 50436, 97317 22522

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50, ದಕ್ಷಿಣ ಸೈಟ್ ಮಾರಾಟಕ್ಕಿದೆ.
70265 83333

**ಮನೆ ಲೀಸ್‌ಗೆ ಇದೆ**
ಕೊಂಡಜ್ಜಿ ರಸ್ತೆ ಶಿಬಾರ ಹತ್ತಿರ ಹೊಸ 2 BHK ಮನೆ 10 ಲಕ್ಷಕ್ಕೆ ಲೀಸ್‌ಗೆ ಇದೆ. 1st & 2nd floor
ಮೊ.98449 69738

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, 3ನೇ ಮುಖ್ಯರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**2 BHK ಮನೆ ಲೀಸ್‌ಗಿದೆ**
ಶಾಮನೂರಿನ ಶಿವ-ಪಾರ್ವತಿ ಬಡಾವಣೆ ಶಿರಮಗೊಂಡನಹಳ್ಳಿ ರಸ್ತೆ # 213/2-3, ವಿಹನ್ಯ ನಿಲಯದಲ್ಲಿ ಸೋಲಾರ್, ಸಿಸಿ ಟಿವಿ, ಬೋರ್ ನೀರಿನ ಸೌಕರ್ಯವಿರುವ 2 ಬೆಡ್ ರೂಂ, 30x56 ಅಡಿ ಅಳತೆಯ ಸುಸಜ್ಜಿತ ಹೊಸ ಮನೆ ಲೀಸ್‌ಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ : 98868-09403

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ.
ಬೈಕ್‌ವುಳ್ಳವರಿಗೆ ಮೊದಲ ಆದ್ಯತೆ.
94823 89317

**ಜಮೀನು ಮಾರಾಟಕ್ಕಿದೆ**
ಜನರಲ್ ಪ್ರಾಪರ್ಟಿ 1.5 ಎಕರೆ ಖಾಲಿ ಹೊಲ, NH4 ನಿಂದ 3ನೇ ಹೊಲ, ಹುಣಸೇಕಟ್ಟೆ ಗ್ರಾಮ, ಹೆಬ್ಬಾಳು ಟೋಲ್‌ನಿಂದ 2 ಕಿಮೀ, ದಾವಣಗೆರೆ.
82176 55264, 87926 56289

**ಬೇಕಾಗಿದ್ದಾರೆ**
ಸ್ವತಃ X-Ray ಮತ್ತು Lab ಗೆ ಸ್ಥಳಾವಕಾಶ. ನಡೆಸಿಕೊಂಡು ಹೋಗುವುದಕ್ಕೆ Polyclinic at P.J. Extn, 8th main, ದಾವಣಗೆರೆ.
75610 51239

**ಮನೆ ಬಾಡಿಗೆ ಇದೆ**
ಸಿದ್ದವೀರಪ ಬಡಾವಣೆ 14ನೇ ತಿರುವು, 7ನೇ ಮೇನ್‌ನಲ್ಲಿ ಸಿಂಗಲ್ ಬೆಡ್ ರೂಮ್ ಮನೆ ಬಾಡಿಗೆ ಇದೆ.
94801 38608

**ಸೈಟು ಮಾರಾಟಕ್ಕಿದೆ**
ಪಿ.ಬಿ. ರಸ್ತೆ, ಪಂಚ ಶನೇಶ್ವರ ದೇವಸ್ಥಾನದ ಹಿಂಭಾಗ, 40x50 ಅಳತೆಯ ಸೈಟ್ ನಂ. 12, ಕಾರ್ನರ್ ಸೈಟ್ ಹಾಗೂ ಉತ್ತರ ಮತ್ತು ಪೂರ್ವಾಭಿಮುಖವಿದೆ.
94497 30390, 98806 36090

**2BHK ಮನೆಗಳು ಬಾಡಿಗೆಗೆ**
ಎರಡು ಬೆಡ್ ರೂಮ್ ಮನೆಗಳು 1ನೇ ಮೇನ್, 1ನೇ ಕ್ರಾಸ್ ತರಳಬಾಳು ಬಡಾವಣೆ, ITI ಕಾಲೇಜ್ ಎದುರು, ಡೋ.ನಂ. 1087, 'ಶ್ರೀ ಜಯದೇವ'
99001 52530, 94499 49302

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಬಾಡಿಗೆಗೆ**
ದೊಡ್ಡಬಾತಿ ಬಸ್‌ಸ್ಟಾಪ್ ಹತ್ತಿರ ನೂತನವಾಗಿ ನಿರ್ಮಿಸಿರುವ 2 ಬೆಡ್ ರೂಂ ಮತ್ತು 1 ಬೆಡ್ ರೂಂನ 3 ಮನೆಗಳು ಬಾಡಿಗೆಗೆ ಇರುತ್ತವೆ. ಮನೆಗಳು ತುಂಬಾ ಅನುಕೂಲಕರವಾಗಿದ್ದು, ವಾಸಕ್ಕೂ, ಆಫೀಸ್‌ಗೂ ಹಾಗೂ ಪಿ.ಜಿ. ನಡೆಸಲು ಅನುಕೂಲಕರವಾಗಿವೆ. ಬೋರ್‌ವೆಲ್ ನೀರಿನ ಅನುಕೂಲವಿರುತ್ತದೆ. (ಸಸ್ಯಹಾರಿಗಳಿಗೆ ಮಾತ್ರ) ಆಸಕ್ತರು ಸಂಪರ್ಕಿಸಿ :
ನೀಲಾ ಭರತೇಶ್
91108 35656
96111 79313

**ಬಟ್ಟೆ ಅಂಗಡಿ ಮಾರಾಟಕ್ಕಿದೆ**
ಬಾಯ್ಸ್ ಹಾಸ್ಟೆಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.
ಸಂಪರ್ಕಿಸಿ :
ಮೊ. 96114-70793

**ಬೇಕಾಗಿದ್ದಾರೆ**
ಎಂಸಿಸಿ ಬಿ ಬ್ಲಾಕ್, 11ನೇ ಮೇನ್, 5ನೇ ಕ್ರಾಸ್‌ನಲ್ಲಿರುವ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಆಯಾ ಕೆಲಸಕ್ಕೆ ಮತ್ತು ಟ್ರೀಟ್‌ಮೆಂಟ್ ಮಾಡಲು ಎಸ್ಸೆಸ್ಸೆಲ್ಸಿ/ ಪಿಯುಸಿ ಓದಿರುವ ಮಹಿಳೆ ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆಯವರೆಗೆ
63634 11022, 98862 22719

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ 2 ಬೆಡ್ ರೂಂ ಮನೆ ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ನಿಟುವಳ್ಳಿ ಲಾಸ್ಟ್ ಬಸ್ ಸ್ಟಾಪ್, 3ನೇ ಮೇನ್, ದಾವಣಗೆರೆ.
94486 66687
79754 44657

**ಮನೆ ಲೀಸ್‌ಗೆ ಇದೆ**
ವಿಳಾಸ : - ಡಾಲರ್ಸ್ ಕಾಲೋನಿ, ಶ್ರೀಸಾಮಾನ್ಯ ನೌಕರರ ಬಡಾವಣೆ ಹತ್ತಿರ, ಶಾಮನೂರು, ದಾವಣಗೆರೆ.
63616 39612
93534 94531

**ಮನೆಯ ರೀ ಪೇಂಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಕಡಿಮೆ ಖರ್ಚಿನಲ್ಲಿ ಅಂದವಾಗಿ ಪೇಂಟ್ ಮಾಡಿ ಕೊಡಲಾಗುವುದು.
72046 33302

**ಗ್ಯಾಸ್ ಗೀಸರ್ ರಿಪೇರಿ**
ನಮ್ಮಲ್ಲಿ ಎಲ್ಲಾ ರೀತಿಯ ಗ್ಯಾಸ್ ಗೀಸರ್‌ಗಳ ರಿಪೇರಿ ಹಾಗೂ ಮಾರಾಟ ಮಾಡಲಾಗುತ್ತದೆ.
ರತ್ನ ಮಾರ್ಕೆಟಿಂಗ್, ವಿದ್ಯಾನಗರ
99019 40727

**ಮನೆ ಮಾರಾಟಕ್ಕಿದೆ**
ನೂತನವಾಗಿ ಕಟ್ಟಿಸಿರುವ ಹೊಸ ಮನೆ ಮಾರಾಟಕ್ಕಿದೆ. ಡುಪ್ಲೆಕ್ಸ್ ಮನೆ, ಎಸ್.ಎಸ್. ಲೇಔಟ್ ದಾವಣಗೆರೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
99806 47014

**ಹೊಸ 2BHK ಮನೆ / ಸಿಂಗಲ್ ರೂಂ ಬಾಡಿಗೆಗಿದೆ**
2 BHK 1ನೇ ಫ್ಲೋರ್, ಹನಗವಾಡಿ ಬಡಾವಣೆ, ಹೊಸ ಕುಂದವಾಡ ಸರ್ವೀಸ್ ರಸ್ತೆ, ಸ್ವಾದ ಕೆಫೆ ಹಿಂಭಾಗ, ದಾವಣಗೆರೆ.
99011 20921

**ಬೇಕಾಗಿದ್ದಾರೆ**
ವೀರಶೈವ ಖಾನಾವಳಿಯಲ್ಲಿ ಕ್ಲೀನರ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ.
ಸಂಬಳ : 12000, ಸಂಪರ್ಕಿಸಿ.
99017 70830, 99458 29046

**COMMERCIAL FOR RENT**
1) Ground floor Shop (13x18) and 1st floor godown (20x20) Good For Automobiles
2) 1st floor Double Bedroom ಮನೆ ವಾಸ ಹಾಗೂ ಖಾನಾವಳಿ ನಡೆಸಲು (1400 sqft) ಬಾಡಿಗೆಗೆ ಇದೆ.
87468 12999

**ಸೈಟ್, ಮನೆ, ಜಮೀನು ಮಾರಾಟಕ್ಕೆ & ಕೊಳ್ಳುವುದಕ್ಕೆ**
ಆಸಕ್ತರು ಸಂಪರ್ಕಿಸಿ : ಏಜೆಂಟ್
94487 13486
99866 77346

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 50x80 ಉತ್ತರ, ಕಮರ್ಷಿಯಲ್ ಆಗುವಂತಹ 120 ಅಡಿ ರಸ್ತೆಗೆ. ಡೈರೆಕ್ಟ್ ಓನರ್.
86604 05346

**ಮನೆ ಮಾರಾಟಕ್ಕಿದೆ**
ನಿಟುವಳ್ಳಿಯ ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 2 ಬೆಡ್ ರೂಂ ಇರುವ ಆರ್.ಸಿ.ಸಿ. ಮನೆ ಮಾರಾಟಕ್ಕಿದೆ.
94486 55850

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ-ಪಾರ್ವತಿ ಬಡಾವಣೆ, ವಿದ್ಯಾನಗರ, ಕುಂದವಾಡದ ಹತ್ತಿರ ಯರಗುಂಟೆ ಹತ್ತಿರ, ಇನ್‌ವೆಸ್ಟ್‌ಮೆಂಟ್ ಸೈಟುಗಳು ಹಾಗೂ ಕಮರ್ಷಿಯಲ್ ಸೈಟುಗಳು ಯೋಗ್ಯ ದರದಲ್ಲಿ ದೊರೆಯುತ್ತವೆ.
97315 12365

**ಬೇಕಾಗಿದ್ದಾರೆ**
vodafone-idea ದಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಪ್ರಮೋಟರ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ : 12,500 ರಿಂದ 20,000 ರೂ.
96321 62204, 70264 45566
91410 05356

**ಸಂಪರ್ಕಿಸಿ**
ನಿಮ್ಮ ಹತ್ತಿರ 2000 ನೋಟ್ ಇದ್ದರೆ ಸಂಪರ್ಕಿಸಿ :
78926 28916

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಬೇಕಾಗಿದ್ದಾರೆ**
ಫೀಲ್ಡ್ ಸರ್ವೀಸ್ ಟೆಕ್ನೀಷಿಯನ್
ವಿದ್ಯಾರ್ಹತೆ: I T I ಫಿಟ್ಟರ್/ ಡಿಪ್ಲೋಮಾ ಇನ್ ಮೆಕ್ಯಾನಿಕಲ್. ಆಕರ್ಷಕ ಸಂಬಳ.
ಅನು ಏಜೆನ್ಸೀಸ್
ಲಾಯರ್ ರೋಡ್, ಜ್ಯೋತಿ ಗ್ಯಾಸ್ ಏಜೆನ್ಸೀಸ್ ಎದುರು, ದಾವಣಗೆರೆ.
98442 47494

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

**ಕಮರ್ಷಿಯಲ್ ಜಾಗ ಬಾಡಿಗೆಗಿದೆ**
ಮೊದಲನೇ ಮಹಡಿ
ಎಂಸಿಸಿ ಬಿ ಬ್ಲಾಕ್, 7ನೇ ಕ್ರಾಸ್, 9ನೇ ಮೇನ್, ಬಾಯ್ಸ್ ಹಾಸ್ಟೆಲ್ ರಸ್ತೆ, ದಾವಣಗೆರೆ.
82177 72482

**ವೃದ್ಧಾಶ್ರಮ**
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ
ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ।।, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
99001 42052, 97319 93770

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**KHB ಕಾಲೋನಿಯಲ್ಲಿ ಸೈಟು ಮಾರಾಟಕ್ಕಿದೆ**
120 Ft. ಡಬಲ್ ರೋಡ್‌ಗೆ ಹೊಂದಿಕೊಂಡಿರುವ ಉತ್ತರ ದಿಕ್ಕಿನ 40x60 ಎರಡು ನಿವೇಶನ ಮಾರಾಟಕ್ಕಿವೆ.
98454 11958, 96633 35235

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಮನೆ ಬಾಡಿಗೆ / ಲೀಸ್‌ಗೆ**
1 BHK High tech extn. 2nd Block, 4th Cross, SS Hospital Road, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದ ಹತ್ತಿರ.
99641 10489 ಮಂಜಪ್ಪ ಹೆಚ್.

**2 BHK ಮನೆ ಬಾಡಿಗೆಗಿದೆ**
ಕೆಟಿಜೆ ನಗರ, 9ನೇ ಕ್ರಾಸ್, 1ನೇ ಮೇನ್ 1ನೇ ಫ್ಲೋರ್‌ನಲ್ಲಿ 2 ಬೆಡ್ ರೂಂ, ಮುನ್ಸಿಪಲ್ & ಬೋರ್‌ವೆಲ್ ನೀರಿನ ವ್ಯವಸ್ಥೆಯಿರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ.
73489 15945

**ಗೋಡೌನ್ ಮತ್ತು ಮಳಿಗೆಗಳು ಬಾಡಿಗೆಗೆ ಇವೆ**
ದಾವಣಗೆರೆ APMC ಸೈಟ್ ನಂ. 20 'F' ಬ್ಲಾಕ್‌ನಲ್ಲಿ ಕಾರ್ನರ್ ಸೈಟ್ ಮಳಿಗೆ : 22x10, 22x10, 22x22, 28x22 ಮತ್ತು ಗೋಡೌನ್ 84x28 ಎತ್ತರ 30 ಅಡಿ ಬಾಡಿಗೆಗೆ ಇವೆ. ಸಂಪರ್ಕಿಸಿ :
98866 74409, 94489 29493

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**FLAT FOR LEASE**
3 BHK, Sqft : 1888
AM Apartment Nainika Prime Rose
Vidyanagar Last city bus stop Davangere.
89519 38228, 80502 22181

**ಮನೆ ಮಾರಾಟಕ್ಕಿದೆ**
#1, 356/10'C' ಸವಣೂರ ಪ್ಲಾಜಾ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ, 60+55/2x40=2300, ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ. 1 ಕೋಟಿ, 30 ಲಕ್ಷಕ್ಕೆ
9742261666, 94498 96502

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ
98440 65710

**ಸೈಟು ಮಾರಾಟಕ್ಕಿದೆ**
40x54 ದಕ್ಷಿಣ ಮುಖ ಇ-ಸ್ವತ್ತು ಡೋ.ನಂ. ಇರುವ ಸೈಟ್ ಹದಡಿ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್, ದಾವಣಗೆರೆ.
ಮಹಾಂತೇಶ್ ಗೌಡ್ರು ದರ (5500)
83105 03746

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
82172 37969, 97413 48103

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ : 84960 44942, 82774 09101
04.01.2025 : ಕಲ್ಕತ್ತಾ, ಪುರಿ ಜಗನ್ನಾಥ : ಭುವನೇಶ್ವರ, ಖಂಡಗಿರಿ, ಧೌಲಿಗಿರಿ, ಉದಯಗಿರಿ, ಸಾಕ್ಷಿ ಗೋಪಾಲನಾಥ, ಕೊನಾರ್ಕ್, ಚಂದ್ರಭಾಗ್ ಬೀಚ್, 6 ದಿನಗಳು. (ವಿಮಾನ ಪ್ರವಾಸ)
28.01.2025 : ತಮಿಳುನಾಡು ಬಸ್ ಪ್ರವಾಸ : ಪಳನಿ, ರಾಮೇಶ್ವರ, ಕನ್ಯಾಕುಮಾರಿ, ಶ್ರೀರಂಗಂ, ಮಧುರೈ, ತಂಜಾವೂರು, ಕುಂಭಕೋಣಂ, ಸುಚೀಂದ್ರಂ, 6 ದಿನಗಳು.
11.02.2025 ಮಧ್ಯಪ್ರದೇಶ, ಗುಜರಾತ್, ನಾಲ್ಕು ಜ್ಯೋತಿರ್ಲಿಂಗ : ಓಂಕಾರೇಶ್ವರ, ಮಹಾಕಾಳೇಶ್ವರ, ಸೋಮನಾಥ, ನಾಗೇಶ್ವರ, ಪಟೇಲ್ ಪ್ರತಿಮೆ, ನಿಷ್ಕಳಂಕ ಮಹಾದೇವ, ಪೋರ್ ಬಂದರ್, ದ್ವಾರಕಾ, ಬೇಟ್ ದ್ವಾರಕಾ, ಅಹಮದಾಬಾದ್, ಮಾತೃಗಯಾ, ಇತರೆ. 10 ದಿನಗಳು (ವಿಮಾನ ಪ್ರವಾಸ)
25.02.2025 ಮಹಾಶಿವರಾತ್ರಿ ವಿಶೇಷ : ಕಾಶಿ, ಜಾರ್ಖಂಡ್ ವೈದ್ಯನಾಥ, ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ 8 ದಿನಗಳು. (ವಿಮಾನ ಪ್ರವಾಸ)
15.03.2025 ರಾಜಸ್ಥಾನ ವಿಮಾನ ಪ್ರವಾಸ : ಜೈಪುರ, ಪುಷ್ಕರ್, ಅಜ್ಮೀರ್, ಜೋಧ್‌ಪುರ, ಉದಯಪುರ, ನಾಥದ್ವಾರ, ಮೌಂಟ್ ಅಬು, ಜೈಸಲ್ಮೇರ್, 9 ದಿನಗಳು.
ಎಲ್ಲಾ ಪ್ರವಾಸಕ್ಕೂ ಪ್ರಯಾಣ ವೆಚ್ಚ, ಏಸಿ ರೂಂ, ವಸತಿ, ಸಸ್ಯಹಾರ ತಿಂಡಿ, ಊಟ ಒಳಗೊಂಡಿದೆ.
ಮಲ್ಲಿಕಾರ್ಜುನ ಟೂರ್ಸ್, ತುಮಕೂರು
84960 44942, 82774 09101

**ಅಡಿಕೆ ತೋಟ ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ತೆಲಗಿ ಗ್ರಾಮ 3 ಎಕರೆ.
100% Legal Documents Upto date loan facility for purchase & Development of Agri Land.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಆರ್.ಜಿ. ರೇವಣಸಿದ್ದಪ್ಪ
97391 17958

**WANTED WE ARE HIRING**
ASHOK LAYLAND
1) Supervisors- Diploma Mech
2) Parts - Diploma Mech - 1
3) DBMSAP - Diploma Mech, Computer Knowledge
4) Technician - Electrician or Mechanic. Contact :
95382 95776
91139 14031

**ಮಳಿಗೆ ಬಾಡಿಗೆಗೆ ಇದೆ**
ಗಡಿಯಾರ ಕಂಬದ ಎದುರು ವಸಂತ ಟಾಕೀಸ್ ರಸ್ತೆಯ ಕಾರ್ನರ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 1 ಹಾಗೂ ಫಸ್ಟ್ ಫ್ಲೋರ್‌ನಲ್ಲಿ 3, ಸೆಕೆಂಡ್ ಫ್ಲೋರ್‌ನಲ್ಲಿ 3 ಮಳಿಗೆ ಹಾಗೂ ಥರ್ಡ್ ಫ್ಲೋರ್‌ನಲ್ಲಿ 3 ರೂಂ ಬಾಡಿಗೆಗೆ ಇವೆ. ಮಳಿಗೆ ಅಳತೆ : 10x21
98444 76185
98445 00114

**ಸೈಟುಗಳು ಮಾರಾಟಕ್ಕಿವೆ**
ಪುಟಗನಾಳು ಗ್ರಾಮದಲ್ಲಿ ಪಂಚಾಯಿತಿ ಡೋರ್ ನಂಬರ್, ಫೈನಲ್ ಅಪ್ರೂವಲ್ ಮತ್ತು ದೂಡ ಅಪ್ರೂವಲ್, ಹೊಸ ಔಟರ್ ರಿಂಗ್ ರೋಡ್‌ನಿಂದ ಕೇವಲ 1.5 km ದೂರದಲ್ಲಿರುವ ಸೈಟ್‌ಗಳು ಮಾರಾಟಕ್ಕಿವೆ. 1 ಅಡಿಗೆ 1050 ರೂ. ಗಳು ಮಾತ್ರ.
8618343463, 86187 28546

**ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನೋಸ್ಟಿಕ್ ಪಕ್ಕದಲ್ಲಿ 780 ಚದುರಡಿ ಜಾಗ ಬಾಡಿಗೆಗೆ ಇದೆ.
92439 61523

**CHANGE OF NAME**
I, Mohammed Rahamath Ulla aged about 51 years, R/o # 512, Azad Nagar Main Road, Davangere. Karnataka, India - 577 001. That in my passport my name is wrongly mentioned as **Mohamed Rahamath Ulla.** So i have changed my name as **Mohammed Rahamath Ulla** vide affidavit dated 10.12.2024 sworn before Notary Public B. Lingaraj, Davangere. Henceforth all my transactions and dealings will be in my name
MOHAMMED RAHAMATH ULLA

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**FURNISHED OFFICE SETUP FOR SALE**
Office setup with all its Interiors and Furniture for sale.Suitable for clinics, offices,Labs in MCC B Block Davangere.
Note: Shop is for rent only
82176 04066, 91482 90536

**ಮನೆ ಲೀಸ್‌ಗೆ ಇದೆ**
2BHK, 2nd Floor, ಗಣೇಶ ಲೇಔಟ್, KSRTC BUSTAND ಹತ್ತಿರ, ದಾವಣಗೆರೆ.
98800 56262

**1BHK ಮನೆ ಬಾಡಿಗೆಗೆ ಇದೆ**
ಭಗತ್ ಸಿಂಗ್ ನಗರ, 11ನೇ ಮೇನ್, 2ನೇ ಕ್ರಾಸ್, ನಂ. 978/25ಎ, ಮಾತಾ ಪಿತೃ ಕೃಪ, (ಕೆಎಸ್‌ಆರ್‌ಟಿಸಿ ಹಿಂಭಾಗ) ಸಸ್ಯಹಾರಿಗಳಿಗೆ ಮಾತ್ರ)
94832 63216
96633 21337

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TO LET**
Single bed Room House East face, #5658/x24, 1st floor, 2nd main, Behind Nutan college, LIC colony, Vidya Nagar, Davangere.
8880425477, 7019835838

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ನಿವೇಶನ ಮಾರಾಟಕ್ಕಿದೆ**
ಶಂಕರ್ ವಿಹಾರ್ ಬಡಾವಣೆಯಲ್ಲಿ 30x80 (ದಕ್ಷಿಣ) ಅಡಿಯುಳ್ಳ ಡೋ. ನಂ. ಇರುವ ನಿವೇಶನ ಮಾರಾಟಕ್ಕಿದೆ.
ಬಿಎಸ್‌ಎನ್‌ಎಲ್ ಹಿಂಭಾಗ ಸಂಪರ್ಕಿಸಿ :
94810 93644
94810 93636

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084



# ಒಳ ಮೀಸಲಾತಿಗಾಗಿ ಶಾಸಕರ ಮನೆ ಮುಂದೆ ತಮಟೆ ಚಳವಳಿ

ದಾವಣಗೆರೆ, ಡಿ. 14- ಪರಿಶಿಷ್ಟ ಜಾತಿಗಳ ನೂರೊಂದು ಸಮುದಾಯಗಳಿಗೂ ಒಳ ಮೀಸಲಾತಿ ಸಾಮಾಜಿಕ ನ್ಯಾಯ ಕೊಡುತ್ತದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟ ತೀರ್ಪು ನೀಡಿದೆ.

ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ, ಬೆಳಗಾವಿ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸುವಂತೆ ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘದಿಂದ ಇಂದು ಶಾಸಕರ ಮನೆ ಮುಂದೆ ತಮಟೆ ಚಳವಳಿ ನಡೆಸಿ, ಮನವಿ ಸಲ್ಲಿಸಲಾಯಿತು.

ಹರಿಯಾಣದ ಬಿಜೆಪಿ ಸರ್ಕಾರ ಸುಪ್ರೀಂ ಕೋರ್ಟ್ ತೀರ್ಪು ಬಂದ ಮೊದಲ ವಾರದಲ್ಲಿಯೇ ಒಳ ಮೀಸಲಾತಿ ಜಾರಿ ಮಾಡಿತು. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಈ ಬದ್ಧತೆ ತೋರುವಲ್ಲಿ ಸಂಪೂರ್ಣ ವಿಫಲವಾಗಿದೆ.

ಅಧಿಕಾರಕ್ಕೆ ಬಂದ ಮೊದಲ ವಾರದಲ್ಲಿಯೇ ಒಳ ಮೀಸಲಾತಿ ಮಾಡುತ್ತೇವೆಂದು ಹೇಳಿ ಅಧಿಕಾರ ಹಿಡಿದ ಕಾಂಗ್ರೆಸ್ ನಾಯಕರು ಮಾದಿಗ ಜನತೆಗೆ ವಿಶ್ವಾಸ ದ್ರೋಹ ಎಸಗಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಈ ಒಳಮೀಸಲಾತಿ ವಿರೋಧಿ ಧೋರಣೆ ಖಂಡಿಸಿ ನಾಡಿದ್ದು ದಿನಾಂಕ 16ರಂದು ಬೆಳಗಾವಿಯಲ್ಲಿ ಬೃಹತ್ ಹಕ್ಕೊತ್ತಾಯ ಸಮಾವೇಶಕ್ಕೆ ಕರೆ ಕೊಡಲಾಗಿದೆ.

ಆದ್ದರಿಂದ ಬೆಳಗಾವಿ ಅಧಿವೇಶನದಲ್ಲಿ ಒಳ ಮೀಸಲಾತಿ ವಿಷಯ ಪ್ರಸ್ತಾಪಿಸಬೇಕು. ಹಾಗೆಯೇ ಬೆಳಗಾವಿ ಹಕ್ಕೊತ್ತಾಯ ಸಮಾವೇಶಕ್ಕೆ ಆಗಮಿಸಬೇಕು ಎಂದು ಶಾಸಕರುಗಳಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಉಪಾಧ್ಯಕ್ಷ ಆಲೂರು ನಿಂಗರಾಜ್, ಜಿಲ್ಲಾಧ್ಯಕ್ಷ ರಾಜು ಶಾಮನೂರು, ಅಂಜಿನಪ್ಪ ಎಂ. ಶಾಮನೂರು, ಜಯಪ್ರಕಾಶ್, ಎಂ.ದುರುಗೇಶ್, ಹಾಲೇಶ್, ಬಿ., ಹರೀಶ್ ಹೊನ್ನೂರು, ಕೆ.ಹೆಚ್. ಅವಿನಾಶ್, ಆಲೂರು ಬಸವರಾಜ್, ಆನಂದ, ನಿಂಗರಾಜ್, ಹೆಚ್.ಚಿದಾನಂದ ಹಾಗೂ ಇತರರು ಈ ಸಂದರ್ಭದಲ್ಲಿದ್ದರು.



# ಕನ್ನಡ ಭಾಷೆ ಉಳಿಸಿ-ಬೆಳೆಸಲು ಆಟೋ ಚಾಲಕರ ಪಾತ್ರ ಮುಖ್ಯ

ದಾವಣಗೆರೆ, ಡಿ.14- ಶಾಲಾ ಆಟೋ ಮತ್ತು ವ್ಯಾನ್ ಚಾಲಕರ ಸಂಘದಿಂದ ಶನಿವಾರ ಸಂಜೆ ಹಮ್ಮಿಕೊಂಡಿದ್ದ 'ಕನ್ನಡ ರಾಜ್ಯೋತ್ಸವ ಸಮಾರಂಭದ ನಿಮಿತ್ತ ಆಟೋ ಮತ್ತು ವ್ಯಾನ್ ರ‍್ಯಾಲಿ ಇಂದಿಲ್ಲಿ ಜರುಗಿತು.

ಹೈಸ್ಕೂಲ್ ಮೈದಾನದಲ್ಲಿನ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಮತ್ತು ಬಿಜೆಪಿ ರೈತ ಮೋರ್ಚಾದ ಲೋಕಿಕೆರೆ ನಾಗರಾಜ್ ರ‍್ಯಾಲಿಗೆ ವಿಧ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಮಾತನಾಡಿ, ಆಟೋ ಚಾಲಕರಿಂದಲೇ ಕನ್ನಡ ಭಾಷೆ ಉಳಿಯುತ್ತಿದೆ ಹಾಗೂ ಅವರಿಂದಲೇ ಭಾಷೆ ಬೆಳೆಯುತ್ತಿದೆ ಎಂದು ಹೇಳಿದರು. ಲಕ್ಷಗಟ್ಟಲೆ ಹಣ ಕೊಟ್ಟು ಖರೀದಿಸಿದ ವಾಹನದ ಮೇಲೆ ಕನ್ನಡದಲ್ಲಿ ಹೆಸರು ಹಾಗೂ ಸಾಹಿತ್ಯಿಕ ಸಾಲುಗಳನ್ನು ಬರೆದು ಕನ್ನಡದ ಸೊಬಗನ್ನು ಹೆಚ್ಚಿಸುತ್ತಿದ್ದಿರಿ ಎಂದು ಹರ್ಷ ವ್ಯಕ್ತಪಡಿಸಿದರು.

ಆಟೋ ಹಾಗೂ ವ್ಯಾನ್ ಚಾಲಕರು ಸಾಮಾಜಿಕ ಕಳಕಳಿ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ರಕ್ತ ದಾನ ಮಾಡುವ ಸತ್ಕಾರ್ಯ ಶ್ಲಾಘನೀಯವಾಗಿದೆ ಎಂದರು.

ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ಕನ್ನಡ ರಾಜ್ಯೋತ್ಸವ ಕೇವಲ ನವೆಂಬರ್ ತಿಂಗಳಿಗೆ ಸೀಮಿತವಾಗದೆ ನಿತ್ಯೋತ್ಸವ ಆಗಬೇಕು ಎಂದು ಹೇಳಿದರು.

ಪ್ರಸಕ್ತ ದಿನಮಾನಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವುದು ನಮ್ಮೆಲ್ಲರ ಕರ್ತವ್ಯ ಆಗಿದ್ದು, ಈ ವಿಚಾರದಲ್ಲಿ ವ್ಯಾನ್ ಮತ್ತು ಆಟೋ ಚಾಲಕರು ಕನ್ನಡಕ್ಕಾಗಿ ಒಂದು ಹೆಜ್ಜೆ ಮುಂದೆ ಬಂದು ಹೋರಾಟ ಮಾಡುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಸಂಘದ ಅಧ್ಯಕ್ಷ ವಿ. ಮಂಜುನಾಥ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ. ಮಂಜುನಾಥ, ಸಂಚಾರಿ ಪೊಲೀಸ್ ಇನ್ಸ್‌ಪೆಕ್ಟರ್ ಶೈಲಜಾ, ಡಾ. ದಿವ್ಯಾ, ಗಂಗಾಧರ, ರುದ್ರಸ್ವಾಮಿ ಮತ್ತು ಸಂಘದ ಸದಸ್ಯರು ಹಾಗೂ ಪದಾಧಿಕಾರಿಗಳಿದ್ದರು.

## ಸ್ವದೇಶಿ ಮೇಳಕ್ಕೆ ಉತ್ತಮ ಸ್ಪಂದನೆ: ಎಸ್.ಟಿ. ವೀರೇಶ್

ದಾವಣಗೆರೆ, ಡಿ.14- ಸ್ವದೇಶಿ ಜಾಗರಣ ಮಂಚ್ ವತಿಯಿಂದ ನಗರದ ಹೈಸ್ಕೂಲ್ ಮೈದಾನದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆಯುತ್ತಿರುವ ಸ್ವದೇಶಿ ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ ಎಂದು ಮೇಳದ ಸಂಘಟಕ ಎಸ್.ಟಿ. ವೀರೇಶ್ ಹೇಳಿದರು.

ಶನಿವಾರ ಮೇಳದ ಸ್ಥಳದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳವನ್ನು ಕೇವಲ ವ್ಯವಹಾರದ ದೃಷ್ಟಿಯಲ್ಲಿ ನಡೆಸುತ್ತಿಲ್ಲ. ಜನರಿಗೆ ಸ್ವದೇಶಿ ವಸ್ತುಗಳ ಕುರಿತು ಜಾಗೃತಿ ಮೂಡಿಸಲು ಆಯೋಜಿಸಲಾಗಿದೆ. ಮೇಳದಲ್ಲಿ ಕಸ ನಿರ್ವಹಣೆ, ತಾರಸಿ ತೋಟ ಮಾಡುವುದು ಸೇರಿದಂತೆ, ವಿವಿಧ ತರಬೇತಿ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿತ್ತು ಎಂದರು.

ದೇಶೀಯ ಕ್ರೀಡೆ, ದೇಶೀಯ ಆಹಾರಗಳು, ದೇಶೀಯ ಉಡುಗೆ-ತೊಡುಗೆ, ದೇಶಿ ಹಸುಗಳ ಪ್ರದರ್ಶನ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತಿವೆ ಎಂದರು.

ಸ್ವದೇಶಿ ಜಾಗರಣ ಮಂಚ್- ಕರ್ನಾಟಕದ ಪ್ರಮುಖ ಕೆ.ಜಗದೀಶ್ ಮಾತನಾಡಿ, ಮೇಳದಲ್ಲಿ ಸುಮಾರು 217ಕ್ಕೂ ಮಳಿಗೆಗಳಿದ್ದು 8000ಕ್ಕೂ ಅಧಿಕ ಉತ್ಪನ್ನಗಳಿವೆ. ಇದರಲ್ಲಿ ಶೇ. 50ರಷ್ಟು ಉತ್ಪನ್ನಗಳು ಮಹಿಳಾ ಉದ್ಯಮದ ಉತ್ಪನ್ನಗಳಾಗಿವೆ ಎಂದರು.

ಒಟ್ಟಾರೆ ಐದು ದಿನದ ಮೇಳದಲ್ಲಿ 5 ಕೋಟಿ ರೂ. ವಹಿವಾಟು ನಿರೀಕ್ಷಿಸಲಾಗಿದೆ. ಮೇಳದ ಮುಂದುವರೆದ ಭಾಗವಾಗಿ ಮುಂದಿನ ದಿನಗಳಲ್ಲಿ ವಾರಕ್ಕೊಮ್ಮೆ ಸ್ವ ಉತ್ಪನ್ನಗಳ ಸಂತೆ ನಡೆಸುವ ಚಿಂತನೆ ಇರುವುದಾಗಿ ಹೇಳಿದರು.



## ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನ ಕಾರ್ತಿಕೋತ್ಸವ

ದಾವಣಗೆರೆ, ಡಿ.13- ನಗರದ ವಿನೋಬನಗರದ 4ನೇ ಮೇನ್ 4ನೇ ಕ್ರಾಸ್‌ನಲ್ಲಿ ಇರುವ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನ ಕಾರ್ತಿಕೋತ್ಸವ ಸಂಭ್ರಮದಿಂದ ನಡೆಯಿತು.

## ನಗರದಲ್ಲಿ ಇಂದು ಜಿಲ್ಲಾ ಮಾದಿಗ-ಛಲವಾದಿ ಸಮಾಜದ ಸಮಾವೇಶ

ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಮಹಾನಗರ ಪಾಲಿಕೆ ಆವರಣದಲ್ಲಿರುವ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಶ್ರೀ ಗುರು ರಾಮದಾಸರ 66 ನೇ ವರ್ಷದ ಹಾಗೂ ಶ್ರೀ ಕೊಂಡಯ್ಯ ಸ್ವಾಮಿಗಳ 18 ನೇ ವರ್ಷದ ಪುಣ್ಯಾರಾಧನೆ, 33 ನೇ ವರ್ಷದ ಸಾಮೂಹಿಕ ವಿವಾಹ,ಜಿಲ್ಲಾ ಮಾದಿಗ-ಛಲವಾದಿ ಸಮಾಜದ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಷಡಕ್ಷರ ಮುನಿ ಸ್ವಾಮೀಜಿ, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸಮಾವೇಶ ಉದ್ಘಾಟಿಸುವರು. ಸಚಿವ ಕೆ.ಹೆಚ್. ಮುನಿಯಪ್ಪ ಭಗವಾನ್ ಬುದ್ಧ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ.

ಸಚಿವ ಹೆಚ್.ಸಿ. ಮಹದೇವಪ್ಪ ಅಂಬೇಡ್ಕರ್ ಭಾವಚಿತ್ರಕ್ಕೆ, ಸಚಿವ ಆರ್.ಬಿ. ತಿಮ್ಮಾಪುರ ಬಾಬು ಜಗಜೀವನ ರಾಂ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಾಮೂಹಿಕ ವಿವಾಹ ಮಹೋತ್ಸವಕ್ಕೆ ಚಾಲನೆ ನೀಡಲಿದ್ದು, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ವಧುಗಳಿಗೆ ಮಾಂಗಲ್ಯ ವಿತರಣೆ, ಸಂಸದ ಗೋವಿಂದ ಕಾರಜೋಳ ವಧು-ವರರಿಗೆ ವಸ್ತ್ರಗಳನ್ನು ವಿತರಣೆ ಮಾಡಲಿದ್ದಾರೆ. ಮಾಜಿ ಸಚಿವ ಹೆಚ್. ಆಂಜನೇಯ ಶ್ರೀ ಕೊಂಡಯ್ಯ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಮಾದಾರ ಚನ್ನಯ್ಯ ಜಯಂತ್ಯುತ್ಸವ ಉದ್ಘಾಟಿಸುವರು. ಮಾಜಿ ಸಂಸದ ಬಿ.ಎನ್. ಚಂದ್ರಪ್ಪ ಗುರು ರಾಮದಾಸ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಸಚಿವ ಬಸವಲಿಂಗಪ್ಪ ಭಾವಚಿತ್ರಕ್ಕೆ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್. ಧರ್ಮಸೇನಾ ಮಾಲಾರ್ಪಣೆಯನ್ನು ಪ್ರೊ. ಬಿ. ಕೃಷ್ಣಪ್ಪ ಭಾವಚಿತ್ರಕ್ಕೆ ಮೇಯರ್ ಕೆ. ಚಮನ್‌ಸಾಬ್ ಮಾಲಾರ್ಪಣೆ ಮಾಡಲಿದ್ದಾರೆ.

ದಿನೇಶ್ ಕೆ. ಶೆಟ್ಟಿ ಶ್ರೀ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದು, ರೇಣುಕಾ ಅವರು ವಧುಗಳಿಗೆ ಕಾಲುಂಗುರ, ಕಡಗ ವಿತರಣೆ ಮಾಡುವರು. ಸೋಗಿ ಶಾಂತಕುಮಾರ ನರಹರಿ ಸ್ವಾಮಿಗಳ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಡಿ.ಜಿ. ಶಾಂತನಗೌಡ, ಹೆಚ್. ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಬಸವರಾಜ ಶಿವಗಂಗಾ, ಅಬ್ದುಲ್ ಜಬ್ಬಾರ್, ಮಾಜಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಎಸ್. ರಾಮಪ್ಪ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

## ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಶಿವಾನುಭವಗೋಷ್ಠಿ, ಸಂಗೀತ

ಬಾಡಾ ಕ್ರಾಸ್ ಬಳಿಯಿರುವ ಶ್ರೀ ಗುರು ಪುಟ್ಟರಾಜ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ 286ನೇ ಹೊಸ್ತಿಲ ಹುಣ್ಣಿಮೆ ಶಿವಾನುಭವಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿದೆ. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸವರು. ಶಾಮನೂರು ಶಿವಶಂಕರಪ್ಪ, ಡಾ. ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸುವರು.ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಶಿಕಲಾ ಮೂರ್ತಿ, ಎಸ್.ಕೆ. ವೀರಣ್ಣ, ಜೆ.ಎನ್. ಕರಿಬಸಪ್ಪ ಆಗಮಿಸುವರು.

## ಕಡ್ಲೇಬಾಳು : ಇಂದು ಕಾರ್ತಿಕ

ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದಲ್ಲಿ ಸಂಜೆ 6 ಗಂಟೆಗೆ ಶ್ರೀ ಆಂಜನೇಯ ಸ್ವಾಮಿಯ ಕಾರ್ತಿಕೋತ್ಸವ ಜರುಗಲಿದೆ.

## ಕಾಂತರಾಜ ವರದಿ ಕುರಿತು ನಗರದಲ್ಲಿ ಇಂದು ಚಿಂತನ-ಮಂಥನ ಕಾರ್ಯಕ್ರಮ

ಕರ್ನಾಟಕ ರಾಜ್ಯ ಅಲ್ಪಸಂಖ್ಯಾಂತರ ಜಾಗೃತಿ ವೇದಿಕೆ ವತಿಯಿಂದ ಹಿಂದುಳಿದ ವರ್ಗಗಳ ಆಯೋಗದ ಕಾಂತರಾಜ ವರದಿ ಕುರಿತು ಚಿಂತನ-ಮಂಥನ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ರೋಟರಿ ಬಾಲಭವನದಲ್ಲಿ ಏರ್ಪಡಿಸಲಾಗಿದೆ.

ಕೆ. ಅಬ್ದುಲ್ ಜಬ್ಬಾರ್ ಉದ್ಘಾಟಿಸಲಿರುವ ಕಾರ್ಯಕ್ರಮದಲ್ಲಿ ಶಿವಸುಂದರ್ ಮುಖ್ಯ ಭಾಷಣಕಾರರಾಗಿ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಬಿ.ಎಂ. ಹನುಮಂತಪ್ಪ, ಅನಂತನಾಯ್ಕ, ಲೋಕಿಕೆರೆ ಸಿದ್ದಪ್ಪ, ಜಬೀನಾ ಖಾನಂ ಉಪಸ್ಥಿತರಿರುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಬ್ದುಲ್ ಘನಿ ತಾಹಿರ್ ವಹಿಸುವರು.

## ಸ್ವದೇಶಿ ಮೇಳದಲ್ಲಿ ವೃದ್ಧನ ಅಸ್ವಸ್ಥತೆ

ದಾವಣಗೆರೆ, ಡಿ.14- ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನಲ್ಲಿ ನಡೆಯುತ್ತಿರುವ ಸ್ವದೇಶಿ ಮೇಳದಲ್ಲಿ ತುರ್ತು ಸಂದರ್ಭದಲ್ಲಿ ಅಗತ್ಯವಾಗಿರುವ ಪ್ರಥಮ ಚಿಕಿತ್ಸೆ ವ್ಯವಸ್ಥೆ ಮಾಡದಿರುವ ಬಗ್ಗೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ವ್ಯಾಕುಲತೆ ವ್ಯಕ್ತಪಡಿಸಿದ್ದಾರೆ.

ಸ್ವದೇಶಿ ಮೇಳ ಆಯೋಜಿಸಿರುವುದು ಅದರಲ್ಲೂ ಅಚ್ಚುಕಟ್ಟಾಗಿ ಮಾಡಿರುವುದು ಸ್ವಾಗತಾರ್ಹ. ಆದರೆ, ಇಂತಹ ದೊಡ್ಡ ಮೇಳದಲ್ಲಿ ಸಂದರ್ಭಕ್ಕನುಗುಣವಾಗಿ ಅತ್ಯಗತ್ಯವಾಗಿರುವ ಪ್ರಥಮ ಚಿಕಿತ್ಸೆ ವ್ಯವಸ್ಥೆಯೂ ಆಗಬೇಕಿತ್ತು ಎಂದು ಅವರು ಹೇಳಿದ್ದಾರೆ.

ಮೇಳದಲ್ಲಿ ಇಂದು ಮಧ್ಯಾಹ್ನ 3.30ರ ಸಮಯದಲ್ಲಿ ನಡೆದ ಅವಘಡವನ್ನು ಪ್ರಸ್ತಾಪಿಸಿರುವ ನಾಗರಾಜ್, ಪ್ರಥಮ ಚಿಕಿತ್ಸೆ ವ್ಯವಸ್ಥೆಯಿಂದ ಅನಾಹುತಗಳನ್ನು ತಪ್ಪಿಸಲು ಸಹಕಾರಿಯಾಗುತ್ತದೆ. ಆಯೋಜಕರು ಇಂತಹ ವ್ಯವಸ್ಥೆ ಬಗ್ಗೆಯೂ ಗಮನ ಹರಿಸಬೇಕಿತ್ತು ಎಂದಿದ್ದಾರೆ.

ತಮ್ಮ ಸ್ನೇಹಿತರೊಂದಿಗೆ ತಾವು ಮೇಳಕ್ಕೆ ಹೋಗಿದ್ದ ಸಂದರ್ಭದಲ್ಲಿ ನಿವೃತ್ತ ಉಪನ್ಯಾಸಕರೆನ್ನಲಾದ ಸುಮಾರು 75-78 ವರ್ಷ ವಯಸ್ಸಿನ ವೃದ್ಧರೊಬ್ಬರು ಆಕಸ್ಮಿಕವಾಗಿ ಆಯ ತಪ್ಪಿ ಕುಸಿದು ಬಿದ್ದರು. ತಕ್ಷಣವೇ ಅಲ್ಲೇ ಇದ್ದ ತಾವು ಮತ್ತು ಸ್ನೇಹಿತರು ಸೇರಿ ತಮಗೆ ಗೊತ್ತಿರುವ ಮಾಹಿತಿಯಂತೆ ಆರೈಕೆ ಮಾಡಿದೆವು. ಆ ವೃದ್ಧರ ಕುಟುಂಬದವರು ಜೊತೆಯಾಗಿದ್ದರಿಂದ ವಾಹನ ತರಿಸಿ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. ಆದರೆ, ಘಟನಾ ಸಂದರ್ಭದಲ್ಲಿ ಮೇಳದ ಸಿಬ್ಬಂದಿಗಳು ಸ್ಪಂದಿಸದಿರುವುದು ಬೇಸರದ ಸಂಗತಿ ಎಂದು ನಾಗರಾಜ್ ತಿಳಿಸಿದ್ದಾರೆ.

ನ್ಯಾಯಬೆಲೆ ಅಂಗಡಿಗಳ ಮಾಲೀಕರ ಒಕ್ಕೂಟದ ಎಂ.ಎನ್. ನಾಗರಾಜ್ ಅವರಲ್ಲದೇ, ವೆಂಕಟೇಶ ನಾಯ್ಕ್, ಬಸವರಾಜ್, ರುದ್ರೇಶ್ ಮತ್ತು ಇತರರು ವೃದ್ಧರ ಆರೈಕೆ ಮಾಡಿದರು.

# ಶೀಘ್ರವೇ ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ಜಾರಿ

**- ವಾರ್ತಾ ಇಲಾಖೆ ಆಯುಕ್ತ ನಿಂಬಾಳ್ಕರ್ ಭರವಸೆ**

**- ಸೇವಾಸಿಂಧು ಮೂಲಕ ಅರ್ಜಿ ಸಲ್ಲಿಕೆಗೆ ಅವಕಾಶ**

ಬೆಂಗಳೂರು, ಡಿ.14- ಹೊಸ ವರ್ಷದಲ್ಲಿ ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ನೀಡಲಾಗುವುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ತಿಳಿಸಿದ್ದಾರೆ.

ಬಸ್ ಪಾಸ್ ಜಾರಿ ಸಂಬಂಧ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮನವಿ ಹಿನ್ನೆಲೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರಿಗೆ ಮಾಹಿತಿ ನೀಡಿರುವ ಅವರು, ಶೀಘ್ರವೇ ಮುಖ್ಯಮಂತ್ರಿಗಳಿಂದ ಯೋಜನೆಗೆ ಚಾಲನೆ ಕೊಡಿಸಲಾಗುವುದು ಎಂದಿದ್ದಾರೆ.

ಗ್ರಾಮೀಣ ಬಸ್ ಪಾಸ್ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಸತತ ಸಭೆಗಳು ಆಗಿದ್ದು, ತಾಲ್ಲೂಕು ಮಟ್ಟದಲ್ಲಿರುವ ಪತ್ರಕರ್ತರಿಗೂ ಈ ಯೋಜನೆ ತಲುಪಿಸುವ ನಿಟ್ಟಿನಲ್ಲಿ ಇಲಾಖೆ ಕ್ರಮ ಕೈಗೊಂಡಿದೆ ಎಂದು ಹೇಳಿದ್ದಾರೆ.

ಬಸ್ ಪಾಸ್‌ಗಾಗಿಯೇ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಸೇವಾ ಸಿಂಧುವಿನಲ್ಲಿ ನಮ್ಮ ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕವೇ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಪತ್ರಕರ್ತರು ವಾರ್ತಾ ಇಲಾಖೆಗೆ ಅರ್ಜಿ ಸಲ್ಲಿಸಬೇಕಿಲ್ಲ ಎಂದರು.

ಬಸ್ ಪಾಸ್‌ಗಾಗಿಯೇ ರಾಜ್ಯ ಮಟ್ಟದಲ್ಲಿ ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಆಯಾ ಜಿಲ್ಲಾ ಮಟ್ಟದಲ್ಲಿ ಉಚಿತವಾಗಿ ಪ್ರವಾಸ ಮಾಡಲು ಬಸ್ ಪಾಸನ್ನು ಜಿಲ್ಲಾ ಮಟ್ಟದಲ್ಲಿಯೇ ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಕೆಲ ಕಠಿಣ ನಿಯಮಾವಳಿ ಸರಳೀಕರಣ ಮಾಡಬೇಕು ಎಂದು ಕೆಯುಡಬ್ಲ್ಯೂಜೆ ಸಲ್ಲಿಸಿರುವ ಮನವಿಯನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ವಹಿಸಲಾಗುವುದು ಎಂದು ಆಯುಕ್ತ ಹೇಮಂತ್ ನಿಂಬಾಳ್ಕರ್ ಅವರು ಹೇಳಿದ್ದಾರೆ.

# ಹರಪನಹಳ್ಳಿ : ವಕೀಲರ ಸಂಘದ ಅಧ್ಯಕ್ಷರಾಗಿ ಟಿ.ವೆಂಕಟೇಶ್



ಹರಪನಹಳ್ಳಿ, ಡಿ. 14 - ತಾಲ್ಲೂಕು ವಕೀಲರ ಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 101 ಮತಗಳನ್ನು ಪಡೆಯುವ ಮೂಲಕ ವಕೀಲರ ಸಂಘದ ಅಧ್ಯಕ್ಷರಾಗಿ ಟಿ. ವೆಂಕಟೇಶ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿ. ಮಂಜಣ್ಣ, ನಳಿನ ಮೆಣಸಿನಕಾಯಿ ತಿಳಿಸಿದ್ದಾರೆ.

ಪಟ್ಟಣದ ನ್ಯಾಯಾಲಯದ ವಕೀಲರ ಕಚೇರಿಯಲ್ಲಿ ವಕೀಲರ ಸಂಘದ ವಿವಿಧ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಟಿ. ವೆಂಕಟೇಶ್ ಮತ್ತು ವಿ.ಜಿ. ಪ್ರಕಾಶ್ ಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಕೆ.ದ್ರಾಕ್ಷಾಯಿಣಿ ಮತ್ತು ಎಸ್. ಮಂಜುನಾಥ ಬಾಗಳಿ, ಕಾರ್ಯದರ್ಶಿ ಸ್ಥಾನಕ್ಕೆ ಕೆ. ಪ್ರಕಾಶ್, ಎಂ. ನಾಗೇಂದ್ರಪ್ಪ, ಎಂ. ಮಲ್ಲಪ್ಪ ನಾಮಪತ್ರ ಸಲ್ಲಿಸಿದ್ದರು.

ಚುನಾವಣೆಯಲ್ಲಿ ಅಧ್ಯಕ್ಷರಾಗಿ ಟಿ. ವೆಂಕಟೇಶ, ಉಪಾಧ್ಯಕ್ಷರಾಗಿ ಎಸ್. ಮಂಜುನಾಥ ಬಾಗಳಿ, ಕಾರ್ಯಾದರ್ಶಿಯಾಗಿ ಎಂ. ಮಲ್ಲಪ್ಪ ಆಯ್ಕೆಯಾಗಿದ್ದಾರೆ. ಖಜಾಂಚಿಯಾಗಿ ಸಣ್ಣ ನಿಂಗನಗೌಡ, ಜಂಟಿ ಕಾರ್ಯದರ್ಶಿಯಾಗಿ ಸಿ. ರಾಜಪ್ಪ, ಕಾರ್ಯಕಾರಿಣಿ ಮಂಡಳಿಯ ಎ.ರೇವಣಸಿದ್ದಪ್ಪ, ಎನ್. ಸಿದ್ದೇಶ್ವರ, ಸಿ. ನಾಗರಾಜನಾಯ್ಕ, ಶ್ರೀನಿವಾಸ ಕನ್ನಪ್ಪನವರ ಅವಿರೋಧವಾಗಿ ಆಯ್ಕೆಯಾಗಿದ್ದರು.

ವಕೀಲರ ಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 206 ಮತದಾರರ ಪೈಕಿ 185 ಸದಸ್ಯರು ಮತ ಚಲಾಯಿಸಿದರು.

ಈ ವೇಳೆ ನಿಕಟ ಪೂರ್ವ ಅಧ್ಯಕ್ಷ ಪಿ. ರಾಮನಗೌಡ ಪಾಟೀಲ, ಮಾಜಿ ಅಧ್ಯಕ್ಷ ಕೆ. ಜಗದಪ್ಪ, ಡಿ. ಅಬ್ದುಲ್ ರಹಿಮಾನ್ ಸಾಹೇಬ್, ವಕೀಲರುಗಳಾದ ಸಿ. ಪೀರ್ ಮಹಮದ್, ಕೆ. ಉಚ್ಚೆಂಗೆಪ್ಪ, ಕೆ.ಎಂ. ಪ್ರಾಣೇಶ, ಕೆ. ಮನೋಹರ, ಕೆ. ಕೊಟ್ರೇಶ, ಹೂಲೆಪ್ಪ, ಮುಜಬರ್ ರಹಿಮಾನ್, ಅರಸಿಕೇರಿ ಎಂ. ಸುರೇಶ, ಮತ್ತಿಹಳ್ಳಿ ನಾಗರಾಜ, ಶ್ರೀನಿವಾಸ, ಎಚ್.ಕೆ. ಮಂಜುನಾಥ, ಶಾಂತ ಲಿಂಗಪ್ಪ, ಸಿದ್ದೇಶ, ಪ್ರಸಾದನಾಯ್ಕ್, ಡಿ. ಹನುಮಂತಪ್ಪ, ಓ. ತಿರುಪತಿ, ತಿಪ್ಪೇಶ, ಮುತ್ತಿಗಿ ರೇವಣಸಿದ್ದಪ್ಪ, ಜೆ. ಸೀಮಾ, ಶಿವರಾಜ, ಗುಡದಯ್ಯ, ಶ್ರೀಕಾಂತ, ಮಾರುತಿ ಹನುಮಂತಪ್ಪ, ಬಸವರಾಜ ಹುಲಿಯಪ್ಪನವರ್, ಕೆ. ತಿರುಮಲ, ಎಚ್.ಬಾಲಾಜಿ, ಕೆ. ರಾಮಪ್ಪ, ಪರಶುರಾಮ ಸೇರಿದಂತೆ ಇತರರು ಇದ್ದರು.

## ಸ್ವದೇಶಿ ಮೇಳದಲ್ಲಿ ಇಂದು 'ಸಾಂಸ್ಕೃತಿಕ ಸಂಭ್ರಮ'

ಸ್ವದೇಶಿ ಜಾಗರಣ ಮಂಚ್ ಕರ್ನಾಟಕ ಮತ್ತು ಸಂಸ್ಕಾರ ಭಾರತೀ ಕರ್ನಾಟಕ ದಾವಣಗೆರೆ ಜಿಲ್ಲಾ ಸಮಿತಿ ವತಿಯಿಂದ ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಹಮ್ಮಿಕೊಂಡಿರುವ ಸ್ವದೇಶಿ ಮೇಳದ 'ಸಾಂಸ್ಕೃತಿಕ ಸಂಭ್ರಮ'ದಲ್ಲಿ ಇಂದು ಸಂಜೆ 7 ಕ್ಕೆ ಬೆಂಗಳೂರಿನ ಆನೂರು ಅನಂತಕೃಷ್ಣ ಶರ್ಮ ಮತ್ತು ತಂಡದವರಿಂದ ಲಯ ಲಾವಣ್ಯ ತಾಳವಾದ್ಯ ಕಚೇರಿ ನಡೆಯಲಿದೆ.

## ಹನಗವಾಡಿ : ಇಂದು ವೀರಭದ್ರೇಶ್ವರ ಕಾರ್ತಿಕೋತ್ಸವ

ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದ ಶ್ರೀ ವೀರಭ ದ್ರೇಶ್ವರ ಸ್ವಾಮಿಯ ಕಾರ್ತಿಕೋತ್ಸ ವವು ಇಂದು ಸಂಜೆ 7.30 ರಿಂದ ಜರುಗಲಿದೆ ಎಂದು ಗ್ರಾಮದ ಚಂದ್ರಶೇಖರ್ ಪೂಜಾರ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕರವೇ ರಾಜ್ಯೋತ್ಸವ

ದಾವಣಗೆರೆ, ಡಿ.14- ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕ (ಪ್ರವೀಣ್ ಶೆಟ್ಟಿ ಬಣ) ದಿಂದ ನಾಳೆ ದಿನಾಂಕ 15 ರ ಭಾನುವಾರ ಹಳೆಯ ಪಿಬಿ ರಸ್ತೆಯಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ 69ನೇ ಕನ್ನಡ ರಾಜ್ಯೋತ್ಸವ, ಸಾಂಸ್ಕೃತಿಕ ಸಂಭ್ರಮ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವೇದಿಕೆ ಜಿಲ್ಲಾಧ್ಯಕ್ಷ ಜಮ್ನಳ್ಳಿ ನಾಗರಾಜ್, ಈ ಕಾರ್ಯಕ್ರಮದಲ್ಲಿ ಮಿಮಿಕ್ರಿ ಗೋಪಿ ಒಳಗೊಂಡಂತೆ ಅನೇಕ ಕಲಾವಿದರು ಭಾಗವಹಿಸಲಿದ್ದಾರೆ. ಎಸ್ಸೆಸ್ಸೆಲ್ಸಿ ಕನ್ನಡ ದಲ್ಲಿ 125 ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ, ವಿವಿಧ ಕ್ಷೇತ್ರ ಸಾಧಕರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು.

ನಾಳೆ ಭಾನುವಾರ ಸಂಜೆ 5.30ಕ್ಕೆ ನಡೆಯುವ ಸಮಾರಂಭದಲ್ಲಿ ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಶ್ರೀ ಸದ್ಗುರು ಮುರುಳೀಧರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದೆ ಡಾ। ಪ್ರಭಾ ಮಲ್ಲಿಕಾರ್ಜುನ್, ಮೇಯರ್ ಕೆ.ಚಮನ್‌ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಶಾಸಕ ಬಸವಂತಪ್ಪ ಉದ್ಘಾಟಿಸುವರು. ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಕಾರ್ಯಕ್ರಮಕ್ಕೂ ಮುನ್ನ ಸಂಜೆ 4ಕ್ಕೆ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ಅವರನ್ನು ಗಾಂಧಿ ವೃತ್ತದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಆಟೋ, ಬೈಕ್ ರ‍್ಯಾಲಿ ಮೂಲಕ ಕರೆ ತರಲಾಗುವುದು ಎಂದರು.

ಜಿಲ್ಲಾ ಕಾರ್ಯಾಧ್ಯಕ್ಷ ಸೈಯದ್ ನಜೀರ್, ರಮೇಶ್ ಮಾನೆ, ರಾಜೇಶ್ ಈಡಿಗರ್, ಪುಷ್ಪ, ಸಿ. ಎನ್. ಮಂಜುನಾಥ್, ಸಿದ್ಧಾರ್ಥ್ ಪುಟಗನಾಳ್, ಸಾಮ್ರಾಟ್, ಅನೂಪ್, ಪ್ರೀತಂ ಬಾಬು ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದು ಅಯ್ಯಪ್ಪ ಸ್ವಾಮಿ ದೀಪೋತ್ಸವ - ಮೆರವಣಿಗೆ

ಶ್ರೀ ಸ್ವಾಮಿ ಅಯ್ಯಪ್ಪ ಶಬರಿಮಲೈ ಸೇವಾ ಸಮಿತಿ ವತಿಯಿಂದ ಲೇಬರ್ ಕಾಲೋನಿ ಶ್ರೀ ಅಯ್ಯಪ್ಪ ಸ್ವಾಮಿ ದೀಪೋತ್ಸವ ಮತ್ತು ಮೆರವಣಿಗೆ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 5 ರಿಂದ ಗಣಪತಿ ಹೋಮ, ಮಧ್ಯಾಹ್ನ 3 ಗಂಟೆಗೆ ನಡೆಯುವ ದೀಪೋತ್ಸವ ಮತ್ತು ಮೆರವಣಿಗೆಯ ಉದ್ಘಾಟನೆಯನ್ನು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ ನೆರವೇರಿಸಲಿದ್ದಾರೆ. ನಾಳೆ ಸೋಮವಾರ ಬೆಳಿಗ್ಗೆ 5 ಗಂಟೆಯಿಂದ 6-30ರ ವರೆಗೆ ಅಗ್ನಿಕುಂಡದ ಹರಕೆ ಅರ್ಪಿಸಲಾಗುತ್ತದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ನಿಬಗೂರು ತಿಳಿಸಿದ್ದಾರೆ.



ಚಿತ್ರ : ಜಿಗಳಿ ಪ್ರಕಾಶ್

## ಭತ್ತದ ಸಸಿ ಮಡಿಗೆ ಬೀಜ ಚೆಲ್ಲಿದ ರೈತರು...

ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಮುಂಗಾರು ಹಂಗಾಮಿನ ಭತ್ತದ ಕಟಾವು ಭರದಿಂದ ಸಾಗಿದ್ದರೆ, ಇತ್ತ ತುಂಗಭದ್ರಾ ನದಿ ಪಾತ್ರದ ಮತ್ತು ದೇವರಬೆಳಕೆರೆ ಪಿಕಪ್ ಡ್ಯಾಂ ಸುತ್ತಮುತ್ತಲಿನ ರೈತರು ಹಾಗೂ ಸ್ವಂತ ಬೋರ್‌ವೆಲ್ ನೀರಿನ ಸೌಲಭ್ಯ ಇರುವ ರೈತರು ಬೇಸಿಗೆ ಹಂಗಾಮಿಗೆ ನಾಟಿ ಮಾಡಲು ಭತ್ತದ ಸಸಿ ಮಡಿ ಚೆಲ್ಲಿದ್ದಾರೆ. ಶನಿವಾರ ಕೊಕ್ಕನೂರು ಸಮೀಪ ರೈತರು ಭತ್ತದ ಸಸಿ ಮಡಿ ಬೆಳೆಸಲು ಬೀಜ ಹಾಕುತ್ತಿರುವ ದೃಶ್ಯ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿತು.


**ಡಾ. ಶುಕ್ಲಾಶೆಟ್ಟಿ ಸಿಟಿ ಕ್ಲಿನಿಕ್ ಸ್ಥಳ ಬದಲಾವಣೆ**

ಬಿನ್ನಿಕಂಪನಿ ರಸ್ತೆ, ಮಂಡಿಪೇಟೆಯಲ್ಲಿದ್ದ ಸಿಟಿ ಕ್ಲಿನಿಕನ್ನು

(ಡಾ.ಶುಕ್ಲಾ ಎಸ್.ಶೆಟ್ಟಿ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು)

ದಿನಾಂಕ 12.12.2024ರ ಗುರುವಾರದಿಂದ 2ನೇ ಮುಖ್ಯ ರಸ್ತೆ,

(ಡಾ. ಎಸ್.ಎಂ. ಎಲಿಯವರ ಮನೆ ಮತ್ತು ಕ್ಲಿನಿಕ್ ರಸ್ತೆ)

ಎಂ.ಸಿ.ಸಿ. 'ಬಿ' ಬ್ಲಾಕ್‌ಗೆ ಸ್ಥಳಾಂತರಿಸಲಾಗಿದೆ.

ಸಂಪರ್ಕಿಸಿ. ಮೊ. 08192 296361



R.No. S.O.R. 208/88/2-2-88 ESTD. 15-7-88

**ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ.), ತೋಳಹುಣಸೆ**

ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ನೇಮಕಾತಿ ಪ್ರಕಟಣೆ**

ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ) ತೋಳಹುಣಸೆ ಇದರ ಅಡಿಯಲ್ಲಿ ನಡೆಯುತ್ತಿರುವ ಅನುದಾನಕ್ಕೆ ಒಳಪಟ್ಟಿರುವ ಶ್ರೀ ಲಿಂಗೇಶ್ವರ ಹಿ.ಪ್ರಾ.ಶಾಲೆ, ಕಂದಗಲ್ಲು ಮತ್ತು ತೋಳಹುಣಸೆ ಶಾಲೆಗಳಲ್ಲಿ ನಿವೃತ್ತಿ, ಮರಣದಿಂದ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು 'ಮಾನ್ಯ ಉಚ್ಚನ್ಯಾಯಾಲಯವು WP-NO-11667 of 2022 ದಿನಾಂಕ: 08-12-2023 ಆದೇಶದಂತೆ ಖಾಲಿ ಹುದ್ದೆ ತುಂಬಲು ಅವಕಾಶ ಕಲ್ಪಿಸಿದ್ದು, ಆಸಕ್ತ ಶಿಕ್ಷಕರು ಪತ್ರಿಕಾ ಪ್ರಕಟಣೆಯಾದ 21 ದಿನದೊಳಗೆ ಅರ್ಜಿಯ ಒಂದು ಪ್ರತಿಯನ್ನು ಜಿಲ್ಲಾ ಉಪನಿರ್ದೇಶಕರು, ಸಾ.ಶಿ.ಇಲಾಖೆ, ದಾವಣಗೆರೆ ತಾ., ಜಿಲ್ಲೆ ಹಾಗೂ ರೂ. 500 ಡಿ.ಡಿ.ಯೊಂದಿಗೆ ಒಂದು ಪ್ರತಿಯನ್ನು ಆಡಳಿತಾಧಿಕಾರಿಗಳು, ಶ್ರೀ ಲಿಂಗೇಶ್ವರ ಹಿ.ಪ್ರಾ.ಶಾಲೆ, ತೋಳಹುಣಸೆ (ಪೋ), ದಾವಣಗೆರೆ ತಾ, ಮತ್ತು ಜಿಲ್ಲೆ ಇವರಿಗೆ ಸಲ್ಲಿಸತಕ್ಕದ್ದು. ನೇಮಕಾತಿಯು ಸರ್ಕಾರದ ಅಧಿನಿಯಮಗಳಂತೆ ನಡೆಯುತ್ತದೆ.

| ಹುದ್ದೆ ಸಂಖ್ಯೆ | ಎಸ್.ಸಿ. | ಎಸ್.ಟಿ. | ಓ.ಬಿ.ಸಿ. | ಸಾಮಾನ್ಯ | ಸಾಮಾನ್ಯ ಮಹಿಳೆ |
|---|---|---|---|---|---|
| 05 | 01 | 01 | 01 | 01 | 01 |
| ವಿದ್ಯಾರ್ಹತೆ | PUC, D.Ed., or B.A. / B.Sc B.Ed., | | | | |

ಸಹಿ/- ಶ್ರೀ ಲಿಂಗೇಶ್ವರ ವಿದ್ಯಾಸಂಸ್ಥೆ (ರಿ), ತೋಳಹುಣಸೆ.

ಮೊ : 9901768096



## ಸಹಕಾರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯ ಆರಂಭ

ದಾವಣಗೆರೆ, ಡಿ.14- ಸ್ಥಳೀಯ ಎಲ್ಲಾ ಸಹಕಾರಿ ಬ್ಯಾಂಕುಗಳ ಉದ್ಯೋಗಿಗಳ ಎರಡು ದಿನಗಳ ಸಹಕಾರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯು ಬಿಐಇಟಿ ಕಾಲೇಜಿನ ಕ್ರೀಡಾಂಗಣದಲ್ಲಿ ಇಂದು ಆರಂಭವಾಯಿತು.

ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ತನ್ನ 50ನೇ ವರ್ಷಾಚರಣೆಯ ಸಂಭ್ರಮದಲ್ಲಿದ್ದು, ಈ ಬ್ಯಾಂಕಿನ ಎಂಪ್ಲಾಯೀಸ್ ಯೂನಿಯನ್ ನೇತೃತ್ವದಲ್ಲಿ ಇದೇ ಪ್ರಪ್ರಥಮ ಬಾರಿಗೆ ಈ ಪಂದ್ಯಾವಳಿ ಆಯೋಜನೆಗೊಂಡಿದೆ.

ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಬಾಪೂಜಿ ಬ್ಯಾಂಕ್, ಶ್ರೀ ಅಂಬಾಭವಾನಿ ಕೋ-ಆಪರೇಟಿವ್ ಬ್ಯಾಂಕ್, ಶಿವ ಸಹಕಾರಿ ಬ್ಯಾಂಕ್, ಜಿಲ್ಲಾ ಸಹಕಾರ ಯೂನಿಯನ್ ಬ್ಯಾಂಕ್ ಸೇರಿದಂತೆ, ಒಟ್ಟು 8 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿವೆ.

ಸಸಿಗೆ ನೀರೆರೆಯುವುದರ ಮೂಲಕ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಮುಂದಿನ ದಿನಗಳಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸಹಕಾರ ಬ್ಯಾಂಕುಗಳ ಉದ್ಯೋಗಿಗಳ ಕ್ರಿಕೆಟ್ ಪಂದ್ಯವನ್ನು ಆಯೋಜಿಸಲು ಉತ್ಸುಕರಾಗಿದ್ದೇವೆ ಎಂದು ತಿಳಿಸಿದರು.

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ, ಕನಕ ಪಟ್ಟಣ ಸಹಕಾರ ಬ್ಯಾಂಕ್ ಅಧ್ಯಕ್ಷ ಪರಶುರಾಮ್, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿರ್ದೇಶಕರುಗಳಾದ ಕಿರುವಾಡಿ ಸೋಮಶೇಖರ್, ಎ.ಹೆಚ್. ಕುಬೇರಪ್ಪ, ಕಿರಣ್ ಶೆಟ್ಟಿ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಇ.ಎಂ. ಮಂಜುನಾಥ, ವಿಕಾಸ್ ಬ್ಯಾಂಕ್‌ನ ಹಿರೇಮಠ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಗರದ ಧರಾಮ ಕಾಲೇಜಿನಲ್ಲಿ ಇಂದು ಸ್ನೇಹ ಸಮ್ಮೇಳನ

ಧ.ರಾ.ಮ ವಿಜ್ಞಾನ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹಿರಿಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಳನ ನಡೆಯಲಿದೆ. ಧ.ರಾ.ಮ. ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಹಿರಿಯ ವಿದ್ಯಾರ್ಥಿಗಳು ಈ ಸ್ನೇಹ ಸಮ್ಮೇಳನದಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 94497 73064, 96113 90375.

# ಮೌಢ್ಯ ಕೈಬಿಡಿ, ಬಸವ ತತ್ವ, ಮೌಲ್ಯ ಅಳವಡಿಸಿಕೊಳ್ಳಿ

### 'ಅರಿವಿನ ಮಹಾಮನೆ' ಉದ್ಘಾಟನೆ, ವಾರ್ಷಿಕೋತ್ಸವದಲ್ಲಿ ಡಾ. ಗುರುಬಸವ ಸ್ವಾಮೀಜಿ



ದಾವಣಗೆರೆ, ಡಿ. 14- ವೈದಿಕ ಆಚರಣೆಗಳು, ಮೌಢ್ಯ, ಕಂದಾಚಾರಗಳನ್ನು ಬಿಟ್ಟು, ಬಸವಣ್ಣನವರ ತತ್ವ, ಮೌಲ್ಯಗಳು, ಲಿಂಗಾಯತ ನಿಜಾಚರಣೆಗಳನ್ನು ಅನುಷ್ಠಾನಗೊಳಿಸುವಂತೆ ಪಾಂಡೋಮಟ್ಟಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ ಕರೆ ನೀಡಿದರು.

ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿರುವ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಬೆಂಗಳೂರು, ದಾವಣಗೆರೆ ಜಿಲ್ಲಾ ಮಹಿಳಾ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಅರಿವಿನ ಮಹಾಮನೆ' ಉದ್ಘಾಟನೆ, ವಾರ್ಷಿಕೋತ್ಸವ ಹಾಗೂ ಶರಣರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಯಾವ ದೋಷಗಳಿಲ್ಲದ್ದು ಲಿಂಗಾಯತ ಧರ್ಮ. ಮನೆಯಲ್ಲಿ ತಂದೆ-ತಾಯಿಗಳು ಧರ್ಮಾಚರಣೆಗಳನ್ನು ಚಾಚೂ ತಪ್ಪದೇ ಪಾಲಿಸಿದರೆ ಮಕ್ಕಳು ಸಹ ಅನುಕರಣೆ ಮಾಡುತ್ತಾರೆ. ಆದ್ದರಿಂದ ಮಕ್ಕಳಿಗೆ ಸಂಸ್ಕಾರ ನೀಡುವುದು ಪೋಷಕರ ಕರ್ತವ್ಯ ಎಂದು ಹೇಳಿದರು.

ಸಾಹಿತಿ ಜಿ.ಕೆ. ಕುಲಕರ್ಣಿ ಅವರು 'ವಚನಗಳಲ್ಲಿ ಆಹಾರ ಪ್ರಜ್ಞೆ' ಕುರಿತು ಮಾತನಾಡಿ, ಮನುಷ್ಯನ ಬದುಕಿಗೆ ಆಹಾರ ಮುಖ್ಯ. ಅಂತಹ ಅನ್ನದ ಮಹತ್ವ ಕುರಿತು ಸರ್ವಜ್ಞ ತ್ರಿಪದಿಗಳಲ್ಲಿ ಉಲ್ಲೇಖ ಮಾಡಿದ್ದು, ವಚನಗಳಲ್ಲಿನ ಆರೋಗ್ಯ ಪ್ರಜ್ಞೆಯ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳುವ ಪ್ರಯತ್ನ ಮಾಡಬೇಕೆಂದು ಸಲಹೇ ನೀಡಿದರು.

ಪಾರಮಾರ್ಥಿಕತೆಯ ಬಗೆಗೆ ಯಾವ ರೀತಿಯಾದ ಚಿಂತನೆ ವಚನಗಳಲ್ಲಿ ಕಂಡು ಬರುತ್ತದೆಯೋ ಹಾಗೆಯೇ ಲೌಕಿಕದ ಬಗೆಯು ವಚನಗಳಲ್ಲಿ ಕಂಡು ಬರುತ್ತದೆ. ಅನ್ನ, ಆಹಾರ, ಆರೋಗ್ಯ, ಅರ್ಥದ ಬಗೆಗೆ ವಚನಗಳಲ್ಲಿ ಮಾಹಿತಿಯನ್ನು ನಾವು ಕಾಣಬಹುದು ಎಂದರು.

ವಚನಗಳಲ್ಲಿ ಅಪಾರವಾದ ಅನುಕಂಪವಿದೆ. ಜಗತ್ತನ್ನು ದುಃಖದಿಂದ ಮುಕ್ತಗೊಳಿಸಬೇಕು ಎನ್ನುವ ಬಯಕೆ ಇದೆ. ದೀನರು, ದಲಿತರನ್ನು ತನ್ನವರೆಂದು ಅಪ್ಪಿಕೊಳ್ಳುವ ಆತ್ಮೀಯತೆ ಇದೆ. ಸಮಾಜದ ಓರೆ ಕೋರೆಗಳನ್ನು ತಿದ್ದುವ ದಿಟ್ಟತನವಿದೆ ಎಂದು ಹೇಳಿದರು.

ಇಂದಿಗೂ ನಮ್ಮ ತಾಯಂದಿರು ವಚನಗಳಲ್ಲಿನ ಆರೋಗ್ಯ ಪ್ರಜ್ಞೆಯನ್ನು ಮಕ್ಕಳಿಗೆ ಹೇಳಿ, ಅವರಲ್ಲಿ ಆರೋಗ್ಯ ಪ್ರಜ್ಞೆ ಮೂಡಿಸುವ ಪ್ರಯತ್ನವನ್ನು ಮಾಡಬೇಕು. ಯಾಕೆಂದರೆ ಮನೆಯೇ ಮೊದಲು ಪಾಠಶಾಲೆ ಜನನಿ ತಾನೇ ಮೊದಲು ಗುರು. ನಾವೆಲ್ಲಾ ವಚನಗಳ ಮೂಲಕ ಆರೋಗ್ಯ ಪ್ರಜ್ಞೆಯನ್ನು ಬೆಳೆಸಿಕೊಂಡು ಒಳ್ಳೆಯ ಆರೋಗ್ಯ ಪಡೆಯೋಣ ಎಂದು ಹಿತ ನುಡಿದರು.

ಪಾಂಡೋಮಟ್ಟಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಬಸವ ಬಳಗದ ಅಧ್ಯಕ್ಷ ಎ.ಹೆಚ್. ಹುಚ್ಚಪ್ಪ ಮಾಸ್ತರ್, ಜಾಗತಿಕ ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಕುಸುಮಾ ಲೋಕೇಶ್, ಗೌರವಾಧ್ಯಕ್ಷೆ ಮಂದಾಕಿನಿ ಸ್ವಾಮಿ, ಜಿಲ್ಲಾಧ್ಯಕ್ಷ ಆವರಗೆರೆ ರುದ್ರಮುನಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ್ದ ಜಾಗತಿಕ ಮಹಾಸಭಾ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಕುಸುಮಾ ಲೋಕೇಶ್ ಹಾಗೂ ಬಸವ ಬಳಗದ ಅಧ್ಯಕ್ಷ ಹುಚ್ಚಪ್ಪ ಮಾಸ್ತರ್ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು. ವಿನೋದ ಅಜಗಣ್ಣನವರ್ ಒಕ್ಕಲಿಗ ಮುದ್ದಣ್ಣ, ಮಾದಾರ ಚನ್ನಯ್ಯ ಶರಣರ ಸ್ಮರಣೆ ಮಾಡಿದರು.

ಪೂರ್ಣಿಮ ಪ್ರಸನ್ನಕುಮಾರ್ ಮತ್ತು ತಂಡದವರು ವಚನ ಪ್ರಾರ್ಥನೆ ಮಾಡಿದರು. ಪ್ರೇಮಾ ಮಂಜುನಾಥ ಸ್ವಾಗತಿಸಿದರು. ನಿರ್ಮಲ ಶಿವಕುಮಾರ್ ನಿರೂಪಿಸಿದರು. ಅಮರಕಲಾ ಹಿರೇಮಠ ವಂದಿಸಿದರು.

ಬಿ.ಟಿ. ಪ್ರಕಾಶ್ ಮತ್ತು ಸಂಗಡಿಗರು ವಚನ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ವೀಣಾ ಮಂಜುನಾಥ್ ಬಹುಮಾನ ವಿತರಿಸಿದರು.

# ನಗರದಲ್ಲಿ ಇಂದು ಪ್ರತಿಮಾ ಸಭಾದಿಂದ ಸ್ವರಾಂಜಲಿ





ಪ್ರತಿಮಾ ಸಭಾ, (ದಾವಣಗೆರೆ) ಮತ್ತು ಸ್ವರಮಯಿ (ಪುಣೆ) ಇವರ ಜಂಟಿ ಆಶ್ರಯದಲ್ಲಿ ಸಾಂಸ್ಕೃತಿಕ ಚೇತನ, ಜಾನಪದ ತಜ್ಞ ಡಾ.ಎಂ.ಜಿ.ಈಶ್ವರಪ್ಪ ಹಾಗೂ ಸ್ವರಯೋಗಿನಿ ಡಾ.ಪ್ರಭಾ ಅತ್ರೆ ಅವರ ಸ್ಮರಣಾರ್ಥ 'ಸ್ವರಾಂಜಲಿ' ಕಾರ್ಯಕ್ರಮವು ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಇಂದು ನಡೆಯಲಿದೆ.

ಸಂಜೆ 5.30ಕ್ಕೆ ಕಾರ್ಯಕ್ರಮವನ್ನು ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಉದ್ಘಾಟಿಸುವರು. ಪ್ರತಿಮಾ ಸಭಾದ ಗೌರವ ಅಧ್ಯಕ್ಷ ಪ್ರೊ. ಎಸ್.ಹಾಲಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರತಿಮಾ ಸಭಾದ ನೂತನ ಅಧ್ಯಕ್ಷರೂ ಆಗಿರುವ ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ತಿಳಿಸಿದ್ದಾರೆ.

ಸ್ವರಾಂಜಲಿ ಕಾರ್ಯಕ್ರಮವನ್ನು ಪಂಡಿತ್ ವೆಂಕಟೇಶ್ ಕುಮಾರ್ ನಡೆಸಿಕೊಡುವರು. ಇವರೊಂದಿಗೆ ರಾಜಸ್ಥಾನ ಸಂಗೀತ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮುಂಬಯಿನ ಡಾ. ಚೇತನಾ ಪಾಠಕ್, ಡಾ.ಎಂ.ಜಿ. ಈಶ್ವರಪ್ಪ ಅವರ ಪುತ್ರ ಪೃಥುವೈನ್ಯ ಇರಲಿದ್ದು, ಪಕ್ಕವಾದ್ಯದಲ್ಲಿ ಕೇಶವ ಜೋಷಿ, ಸಂತೋಷ್ ಹೂಗಾರ, ಗುರುಪ್ರಸಾದ ಹೆಗಡೆ, ಶ್ರೀಶೈಲ ಬಿರಾದಾರ ಇರಲಿದ್ದಾರೆ ಎಂದು ಮಾಹಿತಿ ನೀಡಿದರು.

ದಾವಣಗೆರೆ ಪ್ರತಿಮಾ ಸಭಾ ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯ ಹಾಗೂ ಹವ್ಯಾಸಿ ರಂಗಭೂಮಿ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿ ಈಗಾಗಲೇ ಐವತ್ತು ವರ್ಷಗಳನ್ನು ದಾಟಿ ಹೆಜ್ಜೆ ಇಟ್ಟಿದೆ. ಪ್ರೊ. ಎಸ್. ಹಾಲಪ್ಪ, ಎ.ಎನ್.ಪ್ರಸನ್ನ, ಬಿ.ಜಿ.ನಾಗರಾಜ್, ನಾಡಿಗ್ ಪ್ರಕಾಶ್, ಪಿ.ಜೆ.ರಂಗನಾಥ್ ಮುಂತಾದವರು 1969 ರಲ್ಲಿ ಸಭಾವನ್ನು ಆರಂಭಿಸಿದ್ದರು. ವಿಚಾರ ಸಂಕಿರಣ, ಸಾಹಿತ್ಯ ಗೋಷ್ಠಿಗಳು, ಸಂಗೀತ, ನೃತ್ಯ, ಕ ಹವ್ಯಾಸಿ ನಾಟಕಗಳ ಪ್ರದರ್ಶನ. ಹೀಗೆ ಹತ್ತು, ಹಲವು ಸದಭಿರುಚಿಯ ಕಾರ್ಯಕ್ರಮ ರೂಪಿಸಿ ನೀಡುವ ಮೂಲಕ ಒಂದು ಹೊಸ ಅಲೆಯನ್ನು ಪ್ರತಿಮಾ ಸಭಾ ಹುಟ್ಟುಹಾಕಿತು ಎಂದರು.

ಪ್ರತಿಮಾ ಸಭಾ ಆಯೋಜಿಸಿದ್ದ ಕಾರ್ಯಕ್ರಮಗಳ ಮೂಲಕ ದಾವಣಗೆರೆಗೆ ಡಾ.ಶಿವರಾಮ ಕಾರಂತ, ಡಾ. ದ.ರಾ.ಬೇಂದ್ರೆಯವರು, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಅನಂತ ಮೂರ್ತಿ, ಡಾ. ಚಂದ್ರಶೇಖರ ಕಂಬಾರ, ಚಂಪಾ ಸೇರಿದಂತೆ ಅನೇಕ ಸಾಹಿತ್ಯ ದಿಗ್ಗಜರು ಬಂದು ಸಾಹಿತ್ಯದ ಔತಣ ಬಡಿಸಿ ಹೋಗಿದ್ದಾರೆ ಎಂದು ಬಾ.ಮ. ಮೆಲುಕು ಹಾಕಿದರು.

ಈಗ ಡಾ. ಎಂ.ಜಿ. ಈಶ್ವರಪ್ಪ ಅವರು ನಮ್ಮೊಂದಿಗಿಲ್ಲ. ಅವರ ಶೂನ್ಯತೆಯಲ್ಲಿ ಸಭಾವನ್ನು ಮುನ್ನಡೆಸುವ ಹೊಣೆ ನಮ್ಮ ಮೇಲಿದೆ. ಸಭಾ ಕಟ್ಟಿದ ಹಿರಿಯರಲ್ಲೊಬ್ಬರಾದ ಪ್ರೊ. ಎಸ್. ಹಾಲಪ್ಪ ಅವರ ಮಾರ್ಗದರ್ಶನ ಹಾಗೂ ಗೌರವ ಅಧ್ಯಕ್ಷತೆಯಲ್ಲಿ ಮತ್ತೆ ಪ್ರತಿಮಾ ಸಭಾವನ್ನು ಪುನಶ್ಚೇತನಗೊಳಿಸುತ್ತಿದ್ದೇವೆ. ವರ್ಷಕ್ಕೆ ಕನಿಷ್ಠ 5ರಿಂದ 6 ಎಲ್ಲಾ ತರಹದ ಕಾರ್ಯಕ್ರಮ ನಡೆಸಲಾಗುವುದು. ಸಭಾದ ಹಳೆಯ ಸದಸ್ಯರ ಜೊತೆ ಹೊಸ ಸದಸ್ಯರನ್ನು ಅದರಲ್ಲೂ ಸದಭಿರುಚಿಯ ಯುವ ಸದಸ್ಯರನ್ನು ನೋಂದಾಯಿಸಿಕೊಳ್ಳುತ್ತಿದ್ದೇವೆ ಎಂದು ಅವರು ವಿವರಿಸಿದ್ದಾರೆ.



ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ನೇತೃತ್ವದಲ್ಲಿ ಸ್ವರಾಂಜಲಿ

# ದಕ್ಷಿಣ ಕೊರಿಯಾ ಅಧ್ಯಕ್ಷರ ಉಚ್ಛಾಟನೆಗೆ ಸಂಸತ್ತಿನ ನಿರ್ಣಯ



ಸಿಯೋಲ್, ಡಿ. 14 - ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರ ಉಚ್ಛಾಟನೆಗಾಗಿ ಅಲ್ಲಿನ ಸಂಸತ್ತು ನಿರ್ಣಯ ತೆಗೆದುಕೊಂಡಿದೆ. ದೇಶದಲ್ಲಿ ರಾಜಕೀಯ ತಳಮಳಕ್ಕೆ ಕಾರಣವಾಗುವ ಸೈನಿಕ ಕಾಯ್ದೆಯನ್ನು ಡಿಸೆಂಬರ್ 3 ರಂದು ಜಾರಿಗೆ ತಂದಿದ್ದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

204-85 ಅಂತರದಿಂದ ದಕ್ಷಿಣ ಕೊರಿಯಾದ ರಾಷ್ಟ್ರೀಯ ಸದನ ಈ ನಿರ್ಣಯ ತೆಗೆದುಕೊಂಡಿದೆ. ಈ ನಿರ್ಣಯದ ಪ್ರತಿಗಳನ್ನು ಅಧ್ಯಕ್ಷರಿಗೆ ಹಾಗೂ ಸಂವಿಧಾನಿಕ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಅಧ್ಯಕ್ಷರ ಹಕ್ಕು ಹಾಗೂ ಕರ್ತವ್ಯಗಳಿಗೆ ತಡೆ ಬೀಳಲಿದೆ.

ಯೂನ್ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಸಬೇಕೆ ಅಥವಾ ಉಚ್ಛಾಟನೆ ಮಾಡಬೇಕೆ ಎಂಬ ಬಗ್ಗೆ ನ್ಯಾಯಾಲಯ 180 ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಿದೆ. ಅವರನ್ನು ಉಚ್ಛಾಟಿಸಿದಲ್ಲಿ ಉತ್ತರಾಧಿಕಾರಿಯ ಆಯ್ಕೆ ಮಾಡಲು 60 ದಿನಗಳಲ್ಲಿ ರಾಷ್ಟ್ರೀಯ ಚುನಾವಣೆ ನಡೆಸಬೇಕಿದೆ.

ಯೂನ್ ಉಚ್ಛಾಟನೆಗಾಗಿ ರಾಷ್ಟ್ರೀಯ ಸದನವು 2ನೇ ಬಾರಿ ಸಭೆ ನಡೆಸಿತ್ತು. ಕಳೆದ ಶನಿವಾರ ಅವರ ಉಚ್ಛಾಟನೆಗಾಗಿ ಮತದಾನ ನಡೆದಾಗ ಆಡಳಿತಾರೂಢ ಪಕ್ಷದ ಬಹುತೇಕ ಸದಸ್ಯರು ಮತದಾನಕ್ಕೆ ಬಹಿಷ್ಕಾರ ಹಾಕಿದ್ದರು. ಆದರೆ, ಯೂನ್ ಪರ ಬೆಂಬಲ ತೀವ್ರವಾಗಿ ಕುಸಿದಿತ್ತು ಹಾಗೂ ಅವರ ವಿರುದ್ಧ ಸಾರ್ವಜನಿಕವಾಗಿ ಪ್ರತಿಭಟನೆಗಳು ತೀವ್ರವಾಗಿದ್ದವು. ಈ ಹಿನ್ನೆಲೆಯಲ್ಲಿ ಪೀಪಲ್ಸ್ ಪವರ್ ಪಾರ್ಟಿಯ ಹಲವು ಜನಪ್ರತಿನಿಧಿಗಳು ಅಧ್ಯಕ್ಷರ ವಿರುದ್ಧ ಮತದಾನ ಮಾಡುವುದಾಗಿ ಹೇಳಿದ್ದರು.

ಯೂನ್ ಉಚ್ಛಾಟಿಸಬೇಕು ಹಾಗೂ ಬಂಧಿಸಬೇಕು ಎಂದು ಒತ್ತಾಯಿಸಿ ಕೊರಿಯಾದ ಜನರು ಕಳೆದ 2 ವಾರಗಳಿಂದ ಕಡು ಚಳಿಯ ನಡುವೆಯೂ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ.

ಯೂನ್ ಅಧಿಕಾರದಲ್ಲಿ ಮುಂದುವರೆಯಬೇಕು ಎಂದು ಒತ್ತಾಯಿಸಿ ಸಾವಿರಾರು ಜನರು ಪ್ರತಿಭಟನೆ ನಡೆಸಿದ್ದಾರೆ. ಎರಡೂ ಪ್ರತಿಭಟನೆಗಳು ಶಾಂತಿಯುತವಾಗಿ ನಡೆದಿವೆ.

4 ದಶಕಗಳ ನಂತರ ದಕ್ಷಿಣ ಕೊರಿಯಾ ಮೇಲೆ ಯೂನ್ ಸೈನಿಕ ಆಡಳಿತ ಹೇರಿದ್ದರು. ಆದರೆ 6 ಗಂಟೆಗಳಲ್ಲೇ ಈ ನಿರ್ಧಾರವನ್ನು ವಾಪಾಸ್ ಪಡೆದಿದ್ದರು. ಯೂನ್ ಅವರ ಈ ನಿರ್ಧಾರಗಳಿಂದಾಗಿ ತೀವ್ರ ರಾಜಕೀಯ ತಳಮಳ ಉಂಟಾಗಿತ್ತು ಹಾಗೂ ದೇಶದ ಹಣಕಾಸು ಮಾರುಕಟ್ಟೆಯ ಮೇಲೂ ಪ್ರಭಾವ ಆಗಿತ್ತು. ಸೈನಿಕ ಆಡಳಿತವನ್ನು ವಾಪಾಸ್ ಪಡೆಯಬೇಕು ಎಂದು ಸಂಸತ್ತಿನಲ್ಲಿ ಸರ್ವ ಸಮ್ಮತಿಯಿಂದ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಆನಂತರ ಅನಿವಾರ್ಯವಾಗಿ ಯೂನ್ ತಮ್ಮ ನಿರ್ಧಾರ ಬದಲಿಸಬೇಕಾಯಿತು.



## ನಾಳೆ ದಾನಮ್ಮ ದೇವಿ ಕಡೆ ಕಾರ್ತಿಕೋತ್ಸವ

ದಾವ ಣಗೆರೆ, ಡಿ.14- ನಗರದ ದೊಡ್ಡಪೇಟೆ ಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಶ್ರೀ ಬಸವೇಶ್ವರ ಹಾಗೂ ಶ್ರೀ ದಾನಮ್ಮ ದೇವಿಯ ಕಡೆ ಕಾರ್ತಿಕೋತ್ಸವ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 16ರ ಸೋಮವಾರ ಸಂಜೆ 7.30ಕ್ಕೆ ನಡೆಸಲಾಗುವುದು.

## ನಗರದಲ್ಲಿ ಇಂದು ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ



ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಆಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಹೊಸ್ತಿಲ ಹುಣ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆಯು ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ. ಪರಿವಾರದ ಸಂಚಾಲಕ ಭಾವನ್ನಾರಾಯಣ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿಂದು ಹೊಸ್ತಿಲ ಹುಣ್ಣಿಮೆ, ವಿಶೇಷ ಪೂಜೆ



ದಾವಣಗೆರೆಯ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿಮೆ ಪ್ರಯುಕ್ತ ಇಂದು ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಲಕ್ಷ್ಮಮ್ಮ ಮತ್ತು ಸಹ ಕುಟುಂಬ ಜಿ.ಹೆಚ್. ಗ್ರೂಪ್‌ನವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಆನೆಕೊಂಡದಲ್ಲಿ ಇಂದು ಕಾರ್ತಿಕ



ದಾವಣಗೆರೆ - ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ಕಡೇ ಕಾರ್ತಿಕೋತ್ಸವವು ಇಂದು ರಾತ್ರಿ 8 ಗಂಟೆಗೆ ಜರುಗಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

## ದೊಡ್ಡಬಾತಿ : ಇಂದು ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ಇಂದು ಸಂಜೆ ಜರುಗಲಿದೆ.

## ದೊಡ್ಡಬಾತಿಯಲ್ಲಿ ರೇವಣಸಿದ್ದೇಶ್ವರ ಸ್ವಾಮಿ ಕಾರ್ತಿಕೋತ್ಸವ



ದಾವಣಗೆರೆ, ಡಿ.14- ತಾ. ದೊಡ್ಡಬಾತಿಯಲ್ಲಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 16ರ ಸೋಮವಾರ ಸಂಜೆ ಜರುಗಲಿದೆ.

## ಬಿ.ಕಲಪನಹಳ್ಳಿಯಲ್ಲಿ ಇಂದು ಕಾರ್ತಿಕೋತ್ಸವ



ದಾವಣಗೆರೆ ತಾಲ್ಲೂಕಿನ ಬಿ. ಕಲಪನಹಳ್ಳಿಯ ಶ್ರೀ ಶರಣ ಬಸಪ್ಪವಜ್ಜನವರ ಕಾರ್ತಿಕೋತ್ಸವವು ಇಂದು ರಾತ್ರಿ 8 ಗಂಟೆಗೆ ನಡೆಯಲಿದೆ.

**ಜಮೀನು ಮಾರಾಟಕ್ಕಿದೆ**

ಯರಗುಂಟೆ ಸಮೀಪವಿರುವ ಶಿವಪುರದಲ್ಲಿ ಕೊಂಡಜ್ಜಿ ರಸ್ತೆಗೆ ಮುಖವಾಗಿ ಲೇಔಟ್ ಮಾಡಲು ಯೋಗ್ಯವಾದ 3.07 ಎಕರೆ ಜಮೀನು ಮತ್ತು ಅದೇ ರಸ್ತೆಗೆ ಎರಡು ಕಡೆ ಮುಖವಿರುವ 0.20 ಗುಂಟೆ ಜಮೀನು ಕೂಡ ಮಾರಾಟಕ್ಕೆ ಇವೆ. ಸಂಪರ್ಕಿಸಿ.

Mohan Real Estate Agencies

97424 34049

## ಕೆ. ಚಂದ್ರಶೇಖರಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 7ನೇ ಮುಖ್ಯರಸ್ತೆ, ಎಸ್. ಎಸ್. ಸಮೃದ್ಧಿ ಅಪಾರ್ಟ್‌ಮೆಂಟ್ ನಿವಾಸಿ

**ಶ್ರೀ ಕೆ. ಚಂದ್ರಶೇಖರಪ್ಪ**

**ವಕೀಲರು, (74 ವರ್ಷ)**

ಇವರು, ದಿನಾಂಕ 14.12.2024 ರ ಶನಿವಾರ ರಾತ್ರಿ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಸಹೋದರ ಡಾ. ಕೆ. ರವೀಂದ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.12.2024ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಮುತ್ತುಗದೂರಿನಲ್ಲಿ ನೆರವೇರಿಸಲಾಗುವುದು.

ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ದಾವಣಗೆರೆಯ ಅವರ ಸ್ವಗೃಹ ಎಸ್. ಎಸ್. ಸಮೃದ್ಧಿ ಅಪಾರ್ಟ್ಮೆಂಟ್, 7ನೇ ಮುಖ್ಯರಸ್ತೆ, ಎಂ.ಸಿ.ಸಿ. ಬಿ ಬ್ಲಾಕ್ ನಲ್ಲಿ ಮಧ್ಯಾಹ್ನ 12 ಗಂಟೆಯವರೆಗೆ ಇಡಲಾಗುವುದು.

ಇಂತಿ ದುಃಖ ತಪ್ತರು :

ಪತ್ನಿ : ದಾಕ್ಷಾಯಿಣಿ ಸಿ., ಮಕ್ಕಳು : ಡಾ|| ಶುಭ ಸಂತೋಷ್, ಮೇಘ ರೋಹಿತ್, ಮೊಮ್ಮಕ್ಕಳು, ಮತ್ತು ಮುತ್ತುಗದೂರು ಗೌಡ್ರು ವಂಶಸ್ಥರು.

ಶಶಿ ಎಜುಕೇಶನಲ್ ಟ್ರಸ್ಟ್ (ರಿ.)

"ಲಲಿತಾ ಕೇರ್ ಟೇಕಿಂಗ್"

ಲೋಕಿಕೆರೆ ಮುಖ್ಯ ರಸ್ತೆ, ದಾವಣಗೆರೆ - 577 005.



ಸಂಸ್ಥೆಯ ಪರವಾನಗಿ ಸಂಖ್ಯೆ : TRL00517/1512002028/24-25

- ಲಲಿತಾ ಕೇರ್ ಟೇಕಿಂಗ್ ಸಂಸ್ಥೆಯು 40 ವರ್ಷ ಮೇಲ್ಪಟ್ಟ ಕೌಟುಂಬಿಕ ಪುರುಷ / ಮಹಿಳೆಯರು ಖಾಸಗಿ ವೈಯಕ್ತಿಕ ಜೀವನ ನಡೆಸಲು ಬಯಸಿ ಬಂದವರಿಗೆ ಆದ್ಯತೆ.
- ರುಚಿಕರ ಊಟ ಮತ್ತು ಸುಸಜ್ಜಿತ ವಸತಿಯನ್ನು ಕಲ್ಪಿಸಿ ಆರೈಕೆ ಮಾಡಲಾಗುತ್ತದೆ.
- ಆರೈಕೆ ಕೇಂದ್ರದ ಊಟ & ವಸತಿ ಖರ್ಚನ್ನು ಆ ವ್ಯಕ್ತಿಯೇ ಮೂರು ತಿಂಗಳು, ಆರು ತಿಂಗಳು ಅಥವಾ ವಾರ್ಷಿಕ ರೂಪದಲ್ಲಿ ಹಣ ಸಂದಾಯ ಮಾಡಬಹುದು.
- ಆರೈಕೆ ಕೇಂದ್ರಕ್ಕೆ ಪ್ರತಿನಿತ್ಯ ವೈದ್ಯರು ಮತ್ತು ಶುಶ್ರೂಷಕಿಯರು ಭೇಟಿ ನೀಡುತ್ತಾರೆ.
- ಆರೈಕೆ ಕೇಂದ್ರಕ್ಕೆ ಸೇರುವ ಇಚ್ಛೆಯಿದ್ದಲ್ಲಿ ಒಂದು ತಿಂಗಳ ಮುಂಗಡ ಹಣವನ್ನು ಅರ್ಜಿಯೊಂದಿಗೆ ಪಾವತಿಸತಕ್ಕದ್ದಾಗಿರುತ್ತದೆ.
- ಆರೈಕೆ ಕೇಂದ್ರಕ್ಕೆ ಸೇರ ಬಯಸುವವರು ಮೂಲ ದಾಖಲೆಗಳೊಂದಿಗೆ ಕಛೇರಿಗೆ ಭೇಟಿ ನೀಡಿ. 1) ಆಧಾರ್ ಕಾರ್ಡ್ 2) ವಿಳಾಸ ದೃಢೀಕರಣ ಪತ್ರ.

ಸಂಪರ್ಕಿಸಿ : 73494 88957, 99806 29965




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas